
# ನಮ್ಮ ಸ್ವಾತಂತ್ರ್ಯ



ಡಾ. ಥಾಮಸ್ ಇಸಾಕ್

ಹಮಾರಾದೇಶ್ ಕರ್ನಾಟಕ ರಾಜ್ಯ ಸಮಿತಿ

# ಮುನ್ನುಡಿ

ಅಖಿಲ ಭಾರತ ಜನ ವಿಜ್ಞಾನ ಸಂಘಟನೆಗಳ ಜಾಲ ಈ ವರ್ಷ ನಡೆಸುತ್ತಿರುವ "ಹಮಾರಾ ದೇಶ್" ಕಾರ್ಯಕ್ರಮಗಳನ್ನು ಕರ್ನಾಟಕದಲ್ಲಿ ಬಿರುಸಿನಿಂದ ನಡೆಯುತ್ತಿರುವ ಸಾಕ್ಷರೋತ್ತರ. ಸಾಕ್ಷರತಾ ಮತ್ತು ಸಾಕ್ಷರತಾ ಪೂರ್ವ ಸಿದ್ಧತಾ ಕೆಲಸಗಳಿಗೆ ಪೂರಕವಾಗಿ ಮತ್ತು ಬೆಂಬಲವಾಗಿ ಭಾರತ ಜ್ಞಾನ ವಿಜ್ಞಾನ ಸಮಿತಿ ನಡೆಸುತ್ತಿದೆ. ಈ ಕಾರ್ಯಕ್ರಮದ ಅಂಗವಾಗಿ ನಾವು ನಡೆಸಲಿರುವ "ಲೋಕ ಸಂಪರ್ಕ ಆಂದೋಳನ" ಜನ ವಿಜ್ಞಾನ ಚಳುವಳಿಯ ಕಾರ್ಯಕರ್ತರು ಮತ್ತು ಸಾಕ್ಷರತಾ ಕಾರ್ಯಕರ್ತರಲ್ಲಿ ದೇಶದ ಇಂದಿನ ಆಗುಹೋಗುಗಳ ಬಗ್ಗೆ ಜಾಗೃತಿ ಮೂಡಿಸಿ ರಾಷ್ಟ್ರಾಭಿಮಾನ. ರಾಷ್ಟ್ರೀಯ ಭಾವೈಕ್ಯತೆ. ಕೋಮು ಸೌಹಾರ್ದತೆ. ಮತೀಯ ಸಾಮರಸ್ಯ ಮುಂತಾದ ಭಾವನೆಗಳನ್ನು ಬೆಳೆಸಲು ನಮ್ಮ ಸಮಾಜ. ನಮ್ಮ ಬದುಕು. ನಮ್ಮ ಐಕ್ಯತೆ ಮತ್ತು ನಮ್ಮ ಸ್ವಾತಂತ್ರ್ಯ ಎಂಬ ವಿಷಯಗಳನ್ನು ಕುರಿತು ಆಸಕ್ತಿಯಿಂದ ಆಯ್ದ ಕಾರ್ಯಕರ್ತರೊಂದಿಗೆ ಸಂವಾದ ನಡೆಸಲು ರಾಷ್ಟ್ರೀಯ ಸಮಿತಿ ಹೊರತಂದಿರುವ ಸಂವಾದದ ವಿಷಯಗಳ ಕರಡು ಪ್ರತಿಗಳ ಅನುವಾದವನ್ನು ಕನ್ನಡಕ್ಕೆ ಭಾಷಾಂತರಿಸಿ ಕಿರುಹೊತ್ತಿಗೆಯ ರೂಪದಲ್ಲಿ ಕಾರ್ಯಕರ್ತರ ಅನುಕೂಲಕ್ಕಾಗಿ ಹಾಗೂ ಆಸಕ್ತ ಸಾರ್ವಜನಿಕರಿಗಾಗಿ ಪ್ರಕಟಿಸಲಾಗುತ್ತಿದೆ. ಈ ಸಂವಾದದ ವಿಷಯಗಳನ್ನು ಅನುವಾದಿಸಿಕೊಟ್ಟ ಶ್ರೀ ಎಂ.ಎ.ಸೇತುರಾವ್, M.R.ನಾಗರಾಜು, H.S.ನಿರಂಜನಾರಾಧ್ಯ, M.C. ಡೊಂಗ್ರೆ, N. ಇಂದಿರಮ್ಮ, R.ರಾಮಕೃಷ್ಣಪ್ಪ, C.R.ಭಟ್ ಇವರುಗಳಿಗೆ ಹಾಗೂ ಇದರ ವಿನ್ಯಾಸ ಕೆಲಸವನ್ನು ಉತ್ತಮವಾಗಿ ಮಾಡಿಕೊಟ್ಟ M.H.ಶ್ರೀಧರಮೂರ್ತಿಯವರಿಗೆ ಹಾಗೂ ಶೀಘ್ರವಾಗಿ ಮುದ್ರಿಸಿಕೊಟ್ಟ 'ಆನಂದ್ ಪ್ರೋಸೆಸ್' ರವರಿಗೆ ಭಾರತ ಜ್ಞಾನ ವಿಜ್ಞಾನ ಸಮಿತಿ ಆದರ ಪೂರ್ವಕ ವಂದನೆಗಳನ್ನು ಸಲ್ಲಿಸುತ್ತದೆ.

ಸಿ. ಯತಿರಾಜು
ಭಾರತ ಜ್ಞಾನ ವಿಜ್ಞಾನ ಸಮಿತಿ

# ನಮ್ಮ ಸ್ವಾತಂತ್ರ್ಯ

ನಮ್ಮ ಸ್ವಾತಂತ್ರ್ಯಕ್ಕೆ ತೀವ್ರ ಧಕ್ಕೆ ಬರುವ ಅಪಾಯವಿದೆ. ಇಂದು ನಮ್ಮ ರಾಷ್ಟ್ರದ ಸ್ವಾತಂತ್ರ್ಯಕ್ಕೆ ಬಂದಿರುವಷ್ಟು ಕುತ್ತು ಸ್ವಾತಂತ್ರ್ಯೋತ್ತರದ ಯಾವ ವರ್ಷಗಳಲ್ಲಿಯೂ ಬಂದಿರಲಿಲ್ಲ. ಬ್ರಿಟೀಷರ ವಸಾಹತುಶಾಹಿ ಆಡಳಿತದಿಂದ ಮುಕ್ತವಾಗಿ ಐದು ದಶಕಗಳಾಗುತ್ತಿರುವ ಈ ದಿನಗಳಲ್ಲಿ ಸ್ವಾತಂತ್ರ್ಯದ ಬಗ್ಗೆ ಜನರಿಗೆ ಕರೆ ಕೊಡಬೇಕಾಗಿರುವುದು ನಿಮಗೆ ಆಶ್ಚರ್ಯಕರವಾಗಿ ಕಾಣಬಹುದು. ಈ ಸ್ವಾತಂತ್ರ್ಯಕ್ಕೆ ಧಕ್ಕೆ ಬರುವ ಸ್ಥಿತಿ ಹೇಗೆ ನಿರ್ಮಾಣವಾಯಿತು? ಯಾವ ಶಕ್ತಿಗಳಿಂದ ಈ ಅಪಾಯಗಳು ಬರುತ್ತಿವೆ? ನಾವೀಗ ಏನು ಮಾಡಬೇಕು ಅಥವಾ ಏನು ಮಾಡಬಹುದು?– ಎಂಬ ಪ್ರಶ್ನೆಗಳನ್ನು ಸಂವಾದಕ್ಕೆ ಪ್ರಮುಖವಾಗಿ ಪರಿಗಣಿಸಲಾಗಿದೆ.

ಇಂದಿನ ಪ್ರಪಂಚದಲ್ಲಿ ನಾವು ಸ್ವಾತಂತ್ರ್ಯವನ್ನು ಗಳಿಸುವುದು ಹೇಗೆ ಕಷ್ಟವೋ, ಹಾಗೆ ಉಳಿಸಿಕೊಳ್ಳುವುದೂ ಕಷ್ಟಕರವೆಂಬುದನ್ನು ಅರಿಯಬೇಕು. ಬ್ರಿಟೀಷರು ನಮಗೆ ಸ್ವಾತಂತ್ರ್ಯವನ್ನು ಅವರೇ ಸ್ವತಃ ಬಿಟ್ಟುಕೊಟ್ಟರು. ಅಂದು ಅವರಿಗೆ ಅದು ಅನಿವಾರ್ಯವಾಗಿತ್ತು.

ಐದುನೂರು ವರ್ಷಗಳ ಹಿಂದೆ ವಾಸ್ಕೊಡಗಾಮ ನಮ್ಮ ಕಡಲತೀರದಲ್ಲಿ ತಂಗಿದಾಗ ಈ ಕಥೆ ಪ್ರಾರಂಭವಾಯಿತು. ಪೋರ್ಚುಗೀಸರ ನಂತರ ಡಚ್, ಫ್ರೆಂಚ್ ಮತ್ತು ಬ್ರಿಟೀಷರು ಬಂದರು. ಅಂಧಶ್ರದ್ಧೆ ಮತ್ತು ಜಾತಿವಾದದಿಂದ ತೊಳಲಾಡುತ್ತಿದ್ದ ಭಾರತವು ಒಡೆದ ಮನೆ ಎಂಬುದನ್ನು ಈ ಸಾಮ್ರಾಜ್ಯಶಾಹಿ ಶಕ್ತಿಗಳು ಅರಿತವು. ಪ್ರಾಚೀನ ಭಾರತದ ಭವ್ಯತೆ ಸ್ವಲ್ಪ ಉಳಿದಿದ್ದರೂ, ಸ್ಥಗಿತ ಸಮಾಜ ಎಲ್ಲ ಕಡೆಯೂ ಗೋಚರಿಸುತ್ತಿತ್ತು. ಬ್ರಿಟೀಷರಿಗೆ ಒಬ್ಬ ರಾಜನನ್ನು ಮತ್ತೊಬ್ಬನ ವಿರುದ್ಧ, ಒಂದು ಧರ್ಮವನ್ನು ಮತ್ತೊಂದರ ವಿರುದ್ಧ ಹಾಗೂ ಒಂದು ಜನಾಂಗವನ್ನು ಮತ್ತೊಂದರ ಮೇಲೆ ಜಗಳವಾಡಲು ಬಿಡುವುದು ಸುಲಭದ ಆಟವಾಯಿತು. ಈ ಜಗಳಗಳ ಗೊಂದಲಗಳಲ್ಲಿ ಬ್ರಿಟೀಷರು ವಿಜಯಿಗಳಾದರು.

## ಬ್ರಿಟೀಷ್ ರಾಜ್ಯ ಮತ್ತು ವಸಾಹತುಶಾಹಿಯ ಐಕ್ಯತೆ

ಮೊದಲಿಗೆ ಬ್ರಿಟೀಷರು ನಮ್ಮ ದೇಶವನ್ನು ಸಂಪೂರ್ಣವಾಗಿ ಕೊಳ್ಳೆ ಹೊಡೆದರು. ಅಗಣಿತ ಪ್ರಮಾಣದಲ್ಲಿ ಕೊಳ್ಳೆ ಹಾಗೂ ಲೂಟಿ ನಡೆಯಿತು. 18ನೇ ಶತಮಾನದ ಪ್ರಥಮಾರ್ಧದಲ್ಲಿ ಕೇವಲ ಬಂಗಾಳ ಪ್ರದೇಶದಿಂದ ಲೂಟಿ ಹೊಡೆದ ಸಂಪತ್ತು ಬ್ರಿಟೀಷರ ಹೊಸ ಬಂಡವಾಳ ಪೂರೈಕೆಯ ಶೇಕಡ 30ರಷ್ಟು ಇತ್ತೆಂಬುದನ್ನು ಅಂದಾಜು ಮಾಡಲಾಗಿದೆ. ಈ ಲೂಟಿಯ ಪರಿಣಾಮ ಅಗಾಧವಾಗಿತ್ತು. ಕ್ಷಾಮ ಡಾಮರಗಳಿಂದ ಲಕ್ಷಾಂತರ ಜನ ಸಾವನ್ನಪ್ಪಿದರು. ಅಂತಹ ಬೃಹತ್ ಪ್ರಮಾಣದ ಲೂಟಿಯು ನಿರಂತರ

ಸಾಗುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಅವರು ಬ್ರಿಟೀಷ್ ಕೈಗಾರಿಕೆಗಳಿಗೆ ಕಚ್ಚಾವಸ್ತುಗಳನ್ನು ಪೂರೈಸುವ ವಾಣಿಜ್ಯ ಬೆಳೆಗಳನ್ನು ಭಾರತೀಯ ರೈತರು ಬೆಳೆಯುವಂತೆ ಒತ್ತಾಯ ತಂದರು. ಅಲ್ಲಿಂದ ಸಿದ್ಧವಸ್ತುಗಳನ್ನು ಭಾರತಕ್ಕೆ ಕಳುಹಿಸಲು ಪ್ರಾರಂಭಿಸಿದರು. ನಮ್ಮ ಗುಡಿ ಕೈಗಾರಿಕೆ ಮತ್ತು ಕರಕುಶಲ ವಸ್ತುಗಳ ಉತ್ಪಾದನೆ ಸಾವನ್ನಪ್ಪಿದವು. ಆದರೆ ಈ ಶತಮಾನದಲ್ಲಿ ಅಗತ್ಯ ಬಿದ್ದುದರಿಂದ ಬ್ರಿಟೀಷರು ನಮ್ಮ ದೇಶದಲ್ಲಿ ಕೆಲವು ಕೈಗಾರಿಕೆಗಳು ಬೆಳೆಯಲು ಅವಕಾಶ ನೀಡಿದರು. ಆದರೆ ಕೈಗಾರಿಕೆಗಳಿಗೆ ಯಂತ್ರಗಳನ್ನು ಆಮದು ಮಾಡಿಕೊಳ್ಳುವಂತೆ ಎಚ್ಚರ ವಹಿಸಿದರು. ಭಾರತ ಸ್ವಾಯತ್ತತೆ ಹೊಂದುವುದು ಅವರಿಗೆ ಬೇಕಾಗಿರಲಿಲ್ಲ. ಅವರಿಗೆ ಭಾರತವೇನಿದ್ದರೂ ಬ್ರಿಟೀಷ್ ಸಾಮ್ರಾಜ್ಯದ ಮುಕುಟ ಮಣಿಯಾಗಿಯೇ ಉಳಿಯಬೇಕಿತ್ತು.

ಜಾಗತಿಕ ಆರ್ಥಿಕ ವ್ಯವಸ್ಥೆಗೆ ಭಾರತವು ಸೇರುವಂತೆ ವಸಾಹತು ಆಡಳಿತ ಕ್ರಮ ಕೈಗೊಂಡಿತು. ಜಾಗತಿಕ ವ್ಯವಸ್ಥೆಗೆ ಸೇರುವುದರಿಂದ ಉಂಟಾಗುವ ದುಷ್ಟ ಪರಿಣಾಮವನ್ನು ನಾವೀಗಾಗಲೇ ನೋಡಿದ್ದೇವೆ. ಸಾಮ್ರಾಜ್ಯಶಾಹಿ ಶಕ್ತಿಗಳು ಜಾಗತಿಕ ಆರ್ಥಿಕ ವ್ಯವಸ್ಥೆಯ ನಿರ್ವಹಣೆ ಹಾಗೂ ನಿಯಂತ್ರಣವನ್ನು ಸಾಧಿಸಿದ್ದವು. ಆದರ ಪರಿಣಾಮವಾಗಿ ಭಾರತದಿಂದ ಕಚ್ಚಾ ವಸ್ತುಗಳ ಏಕಮುಖಿ ಸಾಗಣೆ ಮುಂದುವರಿಯುವಂತಾಯಿತು ಮತ್ತು ಭಾರತ ಅವಲಂಬಿತ ದೇಶವಾಗಿ ಉಳಿಯುವಂತಾಯಿತು. ಈ ರೀತಿ ನೈಸರ್ಗಿಕ ವಸ್ತುಗಳ ವಿದೇಶಿ ರವಾನೆಯಿಂದ ನಮ್ಮ ಜನ ಬಡವರಾದರು. ಕೈಗಾರಿಕೆಗಳು ಮುಚ್ಚಲ್ಪಟ್ಟವು. ಬ್ರಿಟೀಷ್ ಸರ್ಕಾರವು ನಮ್ಮ ಗೇಶದ ಪತನವನ್ನು ನೋಡುತ್ತಾ ಕುಳಿತಿತ್ತು. ಇದರ ವಿರುದ್ಧವಾಗಿ ಜನರು ದನಿ ಎತ್ತಿದರು. ಅವರ ದನಿ ಸ್ವಾತಂತ್ರ ಚಳುವಳಿಗೆ ದಾರಿಯಾಯಿತು. ಒತ್ತಾಯದಿಂದ ಬಹಿಷ್ಕಾರದವರೆಗೆ. ಅಸಹಕಾರದಿಂದ ರಾಷ್ಟ್ರೀಯ ಚಳುವಳಿಯವರೆಗೆ ದೇಶ ಸಜ್ಜಾಗಿ ಹೋರಾಟ ಪ್ರಾರಂಭಿಸಿತು.

ಭಾರತವನ್ನು ಬಿಟ್ಟು ತೊಲಗಲು ಬ್ರಿಟೀಷರಿಗೆ ಇಚ್ಛೆಯಿಲ್ಲದಿದ್ದರೂ. ಅವರಿಗೆ ಅನ್ಯಥಾ ಮಾರ್ಗವಿರಲಿಲ್ಲ. ಆದ್ದರಿಂದ 1947ರ ಆಗಸ್ಟ್‌ನಲ್ಲಿ ಭಾರತ ಸ್ವಾತಂತ್ರ್ಯಪಡೆಯಿತು. ನಮ್ಮ ಸ್ವಾತಂತ್ರ್ಯವು ಜಗತ್ತಿನ ವಿವಿಧ ಘಟನೆಗಳಿಂದ ಪ್ರತ್ಯೇಕವಾಗಿರಲಿಲ್ಲ. ಏಷ್ಯ, ಆಫ್ರಿಕ ಮತ್ತು ಲ್ಯಾಟಿನ್ ಅಮೆರಿಕಾದಲ್ಲಿ ಒಂದಾದನಂತರ ಒಂದರಂತೆ ದೇಶಗಳು ಸ್ವತಂತ್ರವಾದವು. ಯುರೋಪಿನ ಬೆರಳಿಸುವಷ್ಟು ದೇಶಗಳು. ಅಮೆರಿಕಾ ಮತ್ತು ಜಪಾನ್‌ಗಳು ಇಡೀ ಪ್ರಪಂಚವನ್ನು ತಮ್ಮ ಪ್ರಭಾವವಲ್ಲಿರುವ ಮತ್ತು ವಸಾಹತು ಪ್ರದೇಶವನ್ನಾಗಿ ಮಾಡಿಕೊಂಡಿದ್ದವು. ವಿಶ್ವದ ಎರಡನೇ ಮಹಾಯುದ್ಧ ಮುಗಿದ ತಕ್ಷಣವೇ ಜಗತ್ತಿನ ವಸಾಹತು ವ್ಯವಸ್ಥೆ ಕುಸಿಯಿತು. ಶತಮಾನಗಳ ಕಾಲ ವಸಾಹತುಗಳ ಸಂಪನ್ಮೂಲಗಳನ್ನು ಬಳಸಿ ಕೊಬ್ಬಿದ್ದ ಈ ಶ್ರೀಮಂತ ರಾಷ್ಟ್ರಗಳಿಗೆ. ಆರ್ಥಿಕ ಹಿತಾಸಕ್ತಿಯನ್ನು ಕಾಪಾಡಲು. ಶೋಷಣೆಯ ವ್ಯವಸ್ಥೆಯನ್ನು ಮುಂದುವರೆಸಲು ಹೊಸ ಮಾರ್ಗಗಳನ್ನು ಅರಸುವುದು ಅನಿವಾರ್ಯವಾಯಿತು. ಆದ್ದರಿಂದ ಜಾಗತಿಕ ನವ ವಸಾಹತುಶಾಹಿ ವ್ಯವಸ್ಥೆ ಅಸ್ತಿತ್ವಕ್ಕೆ ಬರುವಂತೆ ಆ ರಾಷ್ಟ್ರಗಳು ಪ್ರಯತ್ನಿಸಿದವು.

## ನವ ವಸಾಹತು ಶಾಹಿಯ ಮುಂದುವರೆದ ಕೊಳ್ಳೆ

ಬಹುರಾಷ್ಟ್ರೀಯ ಕಂಪನಿಗಳು ಲಾಭದ ಮೂಲಕ ಕೊಳ್ಳೆಹೊಡೆಯುವುದನ್ನು ಮುಂದುವರೆಸಿದವು. ಹಿಂದಿನ ವಸಾಹತುಗಳಿಂದ, ಸಾಲಕ್ಕೆ ಬಡ್ಡಿ ಪಡೆಯುವುದನ್ನು ವಿದೇಶಿ ಬಂಡವಾಳಗಾರರು ಮುಂದುವರಿಸಿದರು. ತಂತ್ರಜ್ಞಾನ ಹಾಗೂ ಸೇವೆಗೆ, ಹಣ ಮತ್ತು ಅತ್ಯಧಿಕ ಸಂಭಾವನೆಯನ್ನು ಪಡೆಯುವುದು ಹಣ ಹೀರುವ ಮತ್ತೊಂದು ಮಾರ್ಗವಾಯಿತು. ವರ್ಷಗಳು ಉರುಳಿದಂತೆ ಸಂಪನ್ಮೂಲಗಳ ಸೋರಿಕೆಯು ವಿವಿಧ ರೂಪಗಳಲ್ಲಿ ಸತತವಾಗಿ ಹೆಚ್ಚಾಗುತ್ತಲೇ ಸಾಗಿತ್ತು. ಅಂದಾಜು ಆ ರೀತಿಯ ಸೋರಿಕೆ ಎಷ್ಟಿರಬಹುದು? ಅದನ್ನು ಊಹಿಸಬಹುದೇ ಹೊರತು ಲೆಕ್ಕ ಹಾಕುವುದು ಕಷ್ಟ. ಏಕೆಂದರೆ ವ್ಯಾಪಾರ ಮತ್ತು ಕೈಗಾರಿಕೆಗಳ ಲಾಭವನ್ನು ಹಲವಾರು ಕಳ್ಳದಾರಿಗಳ ಮೂಲಕ ಸಾಗಿಸಲಾಗುತ್ತದೆ. 80ನೇ ದಶಕದ ಪ್ರಾರಂಭದಲ್ಲಿ ಮೂರನೇ ಜಗತ್ತಿನ ರಾಷ್ಟ್ರಗಳಿಂದ ಒಟ್ಟು ಲಾಭ, ಬಡ್ಡಿ, ಸೇವಾಧನ, ರಾಯಧನದ ಮೂಲಕ ಕನಿಷ್ಠ 15000 ಕೋಟಿ ಡಾಲರ್‌ಗಳಷ್ಟು ಹಣ ಶ್ರೀಮಂತ ರಾಷ್ಟ್ರಗಳಿಗೆ ಹೋಗಿದೆ ಎಂದು ಸ್ಥೂಲವಾದ ಅಂದಾಜು ಮಾಡಲಾಗಿದೆ. ಈ ಹಣದ ಪ್ರಮಾಣ ಎಷ್ಟೆಂಬುದನ್ನು ಒಂದು ಸಣ್ಣ ಹೋಲಿಕೆಯಿಂದ ತಿಳಿಯಬಹುದು – ಆ ಕಾಲಘಟ್ಟದಲ್ಲಿ ಭಾರತದ ಎಲ್ಲ ಪ್ರಜೆಗಳು ಒಂದು ವರ್ಷದಲ್ಲಿ ಉತ್ಪಾದಿಸಿದ ಒಟ್ಟು ಹಣದ ಪ್ರಮಾಣಕ್ಕೆ ಸಮನಾದಷ್ಟು ದೊಡ್ಡ ಪ್ರಮಾಣದ ಹಣ ಇದಾಗಿತ್ತು.

ಇದಷ್ಟೇ ಅಲ್ಲ. (ನಮ್ಮ ಹಿಂದಿನ ವಸಾಹತುಶಾಹಿಗಳು ನಮ್ಮ ದೇಶದ ಸಂಪತ್ತನ್ನು ಕೊಂಡೊಯ್ಯುವ ಇನ್ನೂ ಸೂಕ್ಷ್ಮವಾದ ಮಾರ್ಗಗಳಿವೆ. ಉದಾಹರಣೆಗೆ ನಾವು ರಫ್ತು ಮಾಡುವ ವ್ಯವಸಾಯ ಮತ್ತು ಖನಿಜ ವಸ್ತುಗಳ ಬೆಲೆ ಅತಿನಿಧಾನವಾಗಿ ಏರುವಂತೆ ಮಾರುಕಟ್ಟೆ ಹಾಗೂ ಬೇಡಿಕೆಯ ನಿರ್ವಹಣೆ ಮಾಡುತ್ತಾರೆ. ಅದೇ ವೇಳೆಯಲ್ಲಿ ನಾವು ಅವರಿಂದ ಕೊಂಡುಕೊಳ್ಳುವ ಯಂತ್ರಗಳು ಮತ್ತು ಸಿದ್ಧವಸ್ತುಗಳ ಬೆಲೆಯನ್ನು ಅಪಾರವಾಗಿ ಏರಿಸುತ್ತಾರೆ. ಇದರಿಂದ ನಾವು ಆಮದು ಮಾಡಿಕೊಳ್ಳುವ ವಸ್ತುಗಳ ಪ್ರಮಾಣಕ್ಕೆ ಅತಿ ಹೆಚ್ಚಿನ ವಸ್ತುಗಳನ್ನು ರಫ್ತು ಮಾಡಬೇಕಾಗುತ್ತದೆ.

ಸಾಮ್ರಾಜ್ಯಶಾಹಿಗಳು ನಡೆಸುವ ಅಪ್ರತ್ಯಕ್ಷ ಶೋಷಣೆಯ ರೂಪಗಳು ಹಲವಾರು ರೀತಿಯಲ್ಲಿರುತ್ತವೆ. ಮಾನವ ಶ್ರಮ ಹೆಚ್ಚು ಬೀಳುವ ವಸ್ತುಗಳಾದ ಚಪ್ಪಲಿ, ಶೂ, ಹಾಗೂ ಸಿದ್ಧಪಡಿಸಿದ ಉಡುಪುಗಳನ್ನು ಆ ದೇಶಗಳು ನಮ್ಮಿಂದ ತರಿಸಿಕೊಳ್ಳುವಾಗ ಹಲವಾರು ನಿರ್ಬಂಧಗಳನ್ನು ಒಡ್ಡುತ್ತವೆ. ಸಿದ್ಧಪಡಿಸಿದ ಈ ವಸ್ತುಗಳಿಗೆ ಕಡಿಮೆ ಬೆಲೆಯ ಟೆಂಡರ್ ನೀಡುತ್ತವೆ. ಮೂರನೇ ಜಗತ್ತಿನ ರಾಷ್ಟ್ರಗಳಿಗೆ ನೀಡಿದ ಸಾಲದ ಬಡ್ಡಿಯು ಅಂತರರಾಷ್ಟ್ರೀಯ ಬಡ್ಡಿಯ ಪ್ರಮಾಣಕ್ಕಿಂತ ಹೆಚ್ಚಿರುತ್ತದೆ. ಮೂರನೇ ಜಗತ್ತಿನ ರಾಷ್ಟ್ರಗಳಿಂದ ವಲಸೆ ಹೋಗುವ ನೌಕರರ ಮೇಲೆ ಶ್ರೀಮಂತ ರಾಷ್ಟ್ರಗಳು ನಡೆಸುವ ಜನಾಂಗ ಭೇದ ಎಲ್ಲರಿಗೂ ತಿಳಿದಿರುವ ವಿಷಯ. ಈ ರೀತಿಯ ಮೋಸದ ಕೃತ್ಯಗಳಿಂದ

ಹಾಗೂ ಇತರ ಬಾಬುಗಳಿಂದ ಮೂರನೇ ಜಗತ್ತಿನ ರಾಷ್ಟ್ರಗಳಿಗೆ ಒಂದು ವರ್ಷಕ್ಕೆ 50,000 ಕೋಟಿ ಡಾಲರ್‌ಗಳಷ್ಟು ನಷ್ಟವಾಗುತ್ತಿದೆಯೆಂದು ವಿಶ್ವಸಂಸ್ಥೆಯು ಸಿದ್ಧಪಡಿಸಿರುವ 1991 ಮಾನವ ಅಭಿವೃದ್ಧಿ ವರದಿ ತಿಳಿಸುತ್ತದೆ. ಇದು ಮೂರನೇ ಜಗತ್ತು ಶ್ರೀಮಂತ ರಾಷ್ಟ್ರಗಳಿಗೆ. ನೀಡಬೇಕಾಗಿರುವ ಒಟ್ಟು ಹಣದ ಅರ್ಧದಷ್ಟಿದೆ. ಆದುದರಿಂದ ಸಾಮ್ರಾಜ್ಯಶಾಹಿಯ ಪತನವಾಗಿದ್ದರೂ ಸಹ ಅವರು ಗಳಿಸುವ ಲಾಭ ಕಡಿಮೆಯಾಗಿಲ್ಲ. ಅವರು ಅಂತರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯನ್ನು ನಿಯಂತ್ರಣವನ್ನು ಮುಂದುವರೆಸಿದರು.

## ಮೂರನೇ ಜಗತ್ತಿನ ಸವಾಲು

ಆದರೆ ಅವರು ಬಯಸಿದಂತೆ ಎಲ್ಲವೂ ಸಾಗಲಿಲ್ಲ. ಹಲವಾರು ತೊಡಕುಗಳುಂಟಾದವು. ಮೂರನೇ ಜಗತ್ತಿನ ರಾಷ್ಟ್ರ ಪ್ರೇಮ ಅಗಾಧವಾಗಿತ್ತು. ಅನೇಕ ದೇಶಗಳು ಆರ್ಥಿಕ ವ್ಯವಸ್ಥೆಯನ್ನು ಪೂರ್ಣವಾಗಿ "ತೆರೆಯಲು" ನಿರಾಕರಿಸಿದವು. ಅಂಥ ದೇಶಗಳಲ್ಲಿ ಭಾರತವು ಪ್ರಮುಖವಾಗಿತ್ತು. ಭಾರತದ ಸ್ವಾತಂತ್ರ ಚಳವಳಿಯಲ್ಲಿ ವಿದೇಶಿ ವಸ್ತುಗಳ ಬಹಿಷ್ಕಾರ ಹಾಗೂ ಸ್ವದೇಶಿ ವಸ್ತುಗಳಿಗೆ ಪ್ರೋತ್ಸಾಹ ದೊರೆಯಿತು. ಆದ್ದರಿಂದ ಭಾರತ ಸ್ವತಂತ್ರವಾದ ಮೇಲೆ ಆಮದಿಗೆ ತೀವ್ರವಾದ ತಡೆಯುಂಟು ಮಾಡಿದ್ದು ಸಹಜವಾಗಿಯೇ ಇತ್ತು. ಆಮದಿನ ಅಗತ್ಯವನ್ನು ಸರಿದೂಗಿಸಲು ರಾಷ್ಟ್ರೀಯ ಕೈಗಾರಿಕೆ ಮತ್ತು ಕೃಷಿ ಉತ್ಪನ್ನಕ್ಕೆ ಆದ್ಯತೆ ನೀಡಲಾಯಿತು. ಬೆಳವಣಿಗೆಗೆ ಆಂತರಿಕ ಮಾರುಕಟ್ಟೆಯು ಪ್ರಮುಖ ಪ್ರೇರಣೆಯಾಯಿತು. ನಮ್ಮ ಮಾರುಕಟ್ಟೆ ಬೃಹತ್ ಪ್ರಮಾಣ ಹೊಂದಿರುವುದರಿಂದ ಅಂತಹ ಸ್ವಾವಲಂಬನೆಯ ಗುರಿ ಅರ್ಥಪೂರ್ಣವೂ ಹಾಗೂ ವಾಸ್ತವವೂ ಆಗಿತ್ತು. ಅಲ್ಲದೆ ನಮ್ಮ ಸರ್ಕಾರವು ವಿದೇಶಿ ಬಂಡವಾಳದ ಮೇಲೆ ತಡೆಯೊಡ್ಡಿತ್ತು ಮತ್ತು ಸೇವಾ ಕ್ಷೇತ್ರಗಳಾದ ಬ್ಯಾಂಕ್, ಜೀವವಿಮೆಗಳ ಮೇಲೆ ಪೂರ್ಣ ನಿಯಂತ್ರಣ ಸಾಧಿಸಿತು. ಆಯ್ದ ಕ್ಷೇತ್ರಗಳಿಗೆ ಮಾತ್ರ ತಂತ್ರಜ್ಞಾನ ಆಮದು ಮಾಡಿಕೊಳ್ಳಲು ಅವಕಾಶ ನೀಡಿತು ಮತ್ತು ಭಾರತವೇ ಸ್ವಂತ ಸಾಮರ್ಥ್ಯಗಳನ್ನು ಹೆಚ್ಚಿಸಿಕೊಳ್ಳಲು ಪ್ರೋತ್ಸಾಹ ನೀಡಿತು. ವಿದೇಶಿ ತಜ್ಞರ ಉಚಿತ 'ಸಲಹೆ'ಯನ್ನು ಮೂಲೆಗಿಟ್ಟು ಭಾರತವು ತನ್ನದೇ ಆದ ಬೃಹತ್ ಹಾಗೂ ಅಗತ್ಯ ಉದ್ಯಮಗಳನ್ನು ಸ್ಥಾಪಿಸಲು ತೀರ್ಮಾನಿಸಿತು.

ಭಾರತ ಮತ್ತೊಂದು "ತಪ್ಪನ್ನು" ಎಸಗಿತು. ಸರ್ಕಾರದ ಯಂತ್ರವನ್ನು ಬಳಸಿ ಸಂಪನ್ಮೂಲಗಳನ್ನು ಕ್ರೋಢೀಕರಿಸಿ ಸಾರ್ವಜನಿಕ ಉದ್ಯಮಗಳನ್ನು ಸ್ಥಾಪಿಸಿತು. ಸಾರಿಗೆ. ನೀರಾವರಿ. ವಿದ್ಯುಚ್ಛಕ್ತಿ ಮುಂತಾದ ಮುಖ್ಯ ಕ್ಷೇತ್ರಗಳಲ್ಲಿ ಸಾರ್ವಜನಿಕ ಉದ್ಯಮ ಬೆಳೆಸಿತು. ಇದರಿಂದ ಬೃಹತ್ ಪ್ರಮಾಣದ ಹಾಗೂ ಅಗತ್ಯ ಕೈಗಾರಿಕೆಗಳನ್ನು ಸ್ಥಾಪಿಸಲು ಮತ್ತು ರಾಷ್ಟ್ರೀಯ ತಂತ್ರಜ್ಞಾನದ ಸಾಮರ್ಥ್ಯದ ಅಭಿವೃದ್ಧಿಗೆ ಅಡಿಪಾಯ ಹಾಕಲು ಸಾಧ್ಯವಾಯಿತು. ಭಾರತದ ಯೋಜನಾ ಅಭಿವೃದ್ಧಿಯ ಮಾರ್ಗವನ್ನು ಬದಲಿಸುವುದಕ್ಕೆ ವಿದೇಶದ ಅಭಿಪ್ರಾಯಗಳ ಒತ್ತಡದಿಂದ ಸಾಧ್ಯವಾಗಲಿಲ್ಲ. ಇದು ರಾಷ್ಟ್ರೀಯ

ಚಳುವಳಿಯಲ್ಲಿ ಮೂಡಿ ಬಂದ ರಾಷ್ಟ್ರೀಯ ಭಾವನೆಯ ಅಭಿವ್ಯಕ್ತಿಯಾಗಿತ್ತು. ಭಾರತದ ಆರ್ಥಿಕ ಅಭಿವೃದ್ಧಿಯ ವೇಗವನ್ನು ಹೆಚ್ಚಿಸಲು ಬ್ರಿಟೀಷ್ ಸರ್ಕಾರ ಪ್ರಯತ್ನಿಸುತ್ತಿಲ್ಲ ಎಂಬ ಟೀಕೆ ವಸಾಹತು ಸರ್ಕಾರದ ಮೇಲಿತ್ತು. ಸ್ವತಂತ್ರ ಭಾರತದ ಸರ್ಕಾರವು ಆರ್ಥಿಕ ಪ್ರಗತಿಯ ದಾಪುಗಾಲು ಹಾಕಲು ಎಲ್ಲ ಕ್ರಮಗಳನ್ನೂ ಕೈಗೊಳ್ಳಬೇಕಾಗಿತ್ತು. ಸ್ವಾತಂತ್ರ್ಯ ಪೂರ್ವದ ದಶಕದಲ್ಲಿಯೇ ರಾಷ್ಟ್ರೀಯ ಯೋಜನಾ ಸಮಿತಿಯನ್ನು ರಚಿಸಲಾಗಿತ್ತು. ರಾಷ್ಟ್ರೀಯ ಚಳುವಳಿಯಲ್ಲಿ ಮೂಡಿ ಬಂದ ಒತ್ತಾಸೆಗಳಿಗೆ ಅನುಗುಣವಾಗಿ ಭಾರತದ ಸರ್ಕಾರವು ತನ್ನ ಇತಿ ಮಿತಿಗಳ ನಡುವೆ ಪ್ರಗತಿಗಾಗಿ ಪ್ರಾಮಾಣಿಕ ಪ್ರಯತ್ನ ನಡೆಸಿತು ಎಂಬುದನ್ನು ಒಪ್ಪಲೇಬೇಕು.

ಸಾಮ್ರಾಜ್ಯ ಶಾಹಿಯ ವಿವಿಧ ಹುನ್ನಾರಗಳನ್ನು ಸವಾಲಾಗಿ ಎದುರಿಸಲು ಈ ಶತಮಾನದ ಕೊನೆಯ ಕಾಲುಭಾಗದಲ್ಲಿ ಹಲವಾರು ಅಭಿವೃದ್ಧಿಶೀಲ ರಾಷ್ಟ್ರಗಳು ಪ್ರಯತ್ನಿಸಿದವು. ಎಣ್ಣೆ ಉತ್ಪಾದಿಸುವ ದೇಶಗಳು ಒಂದು ಗುಂಪುರಚಿಸಿಕೊಂಡು ತಮ್ಮ ನೈಸರ್ಗಿಕ ಸಂಪನ್ಮೂಲಕ್ಕೆ ಹೆಚ್ಚಿನ ಬೆಲೆಯ ಬೇಡಿಕೆಯನ್ನು ಮುಂದಿಟ್ಟಿದ್ದು ಒಂದು ಉತ್ತಮ ಉದಾಹರಣೆ. ಮೂರನೇ ಜಗತ್ತಿನ ರಾಷ್ಟ್ರಗಳು ಸೇರಿ ಅಲಿಪ್ತದೇಶಗಳ ಚಳುವಳಿಯ ರೂಪದಲ್ಲಿ ಒಂದು ಪ್ರಮುಖ ಶಕ್ತಿಯಾಗಿ ಬೆಳೆದು ಹಲವಾರು ಜಾಗತಿಕ ವೇದಿಕೆಗಳಲ್ಲಿ ವಿಶ್ವದ ಆರ್ಥಿಕ ವ್ಯವಸ್ಥೆಗೆ ಸುಧಾರಣೆ ತರಬೇಕೆಂಬ ಒತ್ತಾಯ ತಂದವು. ಈ ದೇಶಗಳು ಒತ್ತಾಯ ಮಾಡುತ್ತಿದ್ದ ಹೊಸ ಜಾಗತಿಕ ಆರ್ಥಿಕ ವ್ಯವಸ್ಥೆ ಜಾರಿಗೆ ತಂದಿದ್ದರೆ ಬಹುರಾಷ್ಟ್ರೀಯ ಕಂಪನಿಗಳಿಗೆ ಬಾರಿ ಹೊಡೆತ ಬೀಳುತ್ತಿತ್ತು. ಮೂರನೇ ಜಗತ್ತಿನ ರಾಷ್ಟ್ರಗಳ ಉತ್ಪಾದನೆಗೆ ಉತ್ತಮವಾದ ಬೆಲೆ ದೊರಕುತ್ತಿತ್ತು. ಈ ರಾಷ್ಟ್ರಗಳ ಸಾಲದ ಹೊರೆ ಕಡಿಮೆಯಾಗಿ, ಸಹಾಯದ ಹಣದ ಹೊಳೆ ಹರಿಯುವ ಸಾಧ್ಯತೆ ಹೆಚ್ಚಾಗುತ್ತಿತ್ತು. ತಂತ್ರಜ್ಞಾನ ಮತ್ತು ಮಾಧ್ಯಮಗಳಲ್ಲಿ ಅವು ಸ್ವಾವಲಂಬನೆ ಪಡೆಯುತ್ತಿದ್ದವು. ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಗಳಾದ ವಿಶ್ವಬ್ಯಾಂಕ್ ಮತ್ತು ಅಂತರಾಷ್ಟ್ರೀಯ ಹಣಕಾಸು ನಿಧಿಗಳ ಕಾರ್ಯವು ಪ್ರಜಾಪ್ರಭುತ್ವ ರೀತಿಯಲ್ಲಿ ಸಾಗುತ್ತಿತ್ತು.

ನವವಸಾಹತು ಶಕ್ತಿಗಳ ವಿರುದ್ಧ ಅಭಿವೃದ್ಧಿಶೀಲ ರಾಷ್ಟ್ರಗಳು ಇಂಥಹ ಸವಾಲನ್ನು ಎಸೆಯಲು ಹೇಗೆ ಸಾಧ್ಯವಾಯಿತು? ಅವುಗಳ ಸ್ವಹಿತದ ಜೊತೆಗೆ, ಶಸ್ತ್ರಾಸ್ತ್ರಗಳ ರಾಷ್ಟ್ರೀಯ ಚಳುವಳಿಗಳು ನಡೆಯುತ್ತಿದ್ದುದೂ ಮುಖ್ಯ ಕಾರಣವಿರಬಹುದು. ಎರಡನೇ ಮಹಾಯುದ್ಧದ ನಂತರ ಬದಲಾದ ಅಂತರಾಷ್ಟ್ರೀಯ ರಾಜಕೀಯ ಸ್ಥಿತಿಯೂ ಮತ್ತೊಂದು ಕಾರಣವಿರಬಹುದು. ಆಗ ಬಲಿಷ್ಠವಾದ ಸಮಾಜವಾದಿ ದೇಶಗಳ ಬಣ ಅಸ್ತಿತ್ವಕ್ಕೆ ಬಂದಿತ್ತು. ಆದೇಶಗಳ ಸಹಕಾರದಿಂದ ಮತ್ತು ಸಾಮ್ರಾಜ್ಯಶಾಹಿಗಳ ವಿರೋಧಿಸುವ ಆ ದೇಶಗಳ ನಿಲುವಿನಿಂದ ಭಾರತದಂತಹ ದೇಶಗಳಿಗೆ ಸ್ವಾವಲಂಬನೆಯ ಮಾರ್ಗದಲ್ಲಿ ಪ್ರಗತಿ ಸಾಧಿಸುವ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲು ಸಾಧ್ಯವಾಗಿತ್ತು.

# ಹೊಸ ಜಾಗತಿಕ ವ್ಯವಸ್ಥೆ – ಮರು ಆಕ್ರಮಣ

ಯುರೋಪ್‌ನಲ್ಲಿ ಸಮಾಜವಾದಿ ದೇಶಗಳ ಪತನದ ನಂತರ ಸಾಮ್ರಾಜ್ಯಶಾಹಿಯು ಮೂರನೇ ಜಗತ್ತಿನ ರಾಷ್ಟ್ರಗಳು ಕನಸು ಕಂಡಿದ್ದ ಅಂತರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯ ಹೊಸ ಹಾದಿಯನ್ನು ಮುಚ್ಚಿ ಹಾಕಲು. ವಿಶ್ವಾದ್ಯಂತ ಮರು ಆಕ್ರಮಣ ಪ್ರಾರಂಭಿಸಿದೆ. ಮೂರನೇ ಜಗತ್ತಿನ ರಾಷ್ಟ್ರಗಳ ಆರ್ಥಿಕ ವ್ಯವಸ್ಥೆಯನ್ನು ಮತ್ತು ಅಂತಾರಾಷ್ಟ್ರೀಯ ಆರ್ಥಿಕ ಸಂಬಂಧಗಳನ್ನು ತನ್ನಿಚ್ಛೆಗೆ ತಕ್ಕಂತೆ ಬದಲಾಯಿಸಲು ದೃಢ ಪ್ರಯತ್ನ ಮಾಡಿದೆ. ಈ ಉದ್ದೇಶಗಳನ್ನು ಸಾಧಿಸಲು ಸಾಮ್ರಾಜ್ಯಶಾಹಿ ಶಕ್ತಿಗಳು ಯಾವ ಮಟ್ಟಕ್ಕೆ ಹೋಗಲೂ ಸಿದ್ಧವಿವೆ. ಇರಾಕ್‌ನ ವಿರುದ್ಧ ಅಮೆರಿಕಾ ನಡೆಸಿದ ಭಯಾನಕ ಆಕ್ರಮಣವು ನೂತನ ಶೈಲಿಯ ಫಿರಂಗಿ ಭಯೋತ್ಪಾದಕತೆಯಾಗಿತ್ತು. ನೇರವಾದ ಮಿಲಿಟರಿ ಬೆದರಿಕೆಯ ಜೊತೆಗೆ ಬೇರೆ ದೇಶಗಳ ಆರ್ಥಿಕ ಕಾರ್ಯಯೋಜನೆಗಳಲ್ಲಿ ತೀರ್ಮಾನ ನೀಡುವ ನಾಯಕತ್ವವನ್ನು ಅಮೆರಿಕಾ ಸ್ವತಃ ವಹಿಸಿಕೊಂಡಿದೆ ಮತ್ತು ಆ ತೀರ್ಮಾನಗಳನ್ನು ದೇಶಗಳು ಪಾಲಿಸುವಂತೆ ಮಾಡಲು ಆ ದೇಶಗಳ ಕೈ ತಿರುಚುವ. ಕತ್ತು ಹಿಸುಕುವ ಅನೇಕ ಕಾನೂನುಗಳನ್ನು ಜಾರಿಮಾಡುತ್ತಿದೆ. ಮೂರನೇ ಜಗತ್ತಿನ ರಾಷ್ಟ್ರಗಳ ಸಾರ್ವಭೌಮತ್ವಕ್ಕೆ ಯಾವುದು ಅತ್ಯುತ್ತಮವೆಂಬುದನ್ನು ವಿಶ್ವಬ್ಯಾಂಕ್ ಮತ್ತು ಅಂತರಾಷ್ಟ್ರೀಯ ಹಣಕಾಸು ನಿಧಿಯ ಅಧಿಕಾರಿಗಳು ತೀರ್ಮಾನಿಸುವ ಮಟ್ಟಕ್ಕೆ ಬಂದಿದ್ದಾರೆ!

ಐದು ಶತಮಾನಗಳ ಹಿಂದೆ ನಮ್ಮ ದೇಶಕ್ಕೆ ಬಂದ ಬಿಳಿಯರು. ಇತಿಹಾಸದ ದೀರ್ಘ ಕೊಳ್ಳೆ ಮತ್ತು ಲೂಟಿ ಮಾಡುವ ಮೊದಲು ಅನುಕೂಲ ಸಿಂಧು ಸಿದ್ಧಾಂತವನ್ನು ಮಂಡಿಸಿದ್ದರು. ಸ್ಥಳೀಯ ಬರ್ಬರ ಸಂಸ್ಕೃತಿಯ ಜನರನ್ನು ಮೇಲೆತ್ತಲು ಅವರು ಇತಿಹಾಸದ ನಾಗರೀಕ ಏಜೆಂಟರಾಗಿ 'ಬಿಳಿ ಜನರ ಕರ್ತವ್ಯ' ನಿರ್ವಹಿಸಲು ಬಂದಿದ್ದೇವೆ ಎನ್ನುತ್ತಿದ್ದರು. ಇಂದು ಬರುತ್ತಿರುವ ಹೊಸ ಸೇವಾ ಕಾರ್ಯಕರ್ತರ ವಿಚಾರ ಹೀಗಿದೆ : –ಮೂರನೇ ಜಗತ್ತಿನ ರಾಷ್ಟ್ರಗಳ ಜನರು ಬಿಳಿಯರ ಭಾಷೆ ಮತ್ತು ರೀತಿ ನೀತಿಗಳನ್ನು ಅರಿತಿದ್ದಾರೆ. ಆದರೆ ಬಿಳಿಯರ ಆರ್ಥಿಕ ದಕ್ಷತೆಯನ್ನು ಕಲಿತಿಲ್ಲ. ಅವರಿಗೆ ಕೃಷಿ ಮತ್ತು ಕೈಗಾರಿಕೆಗಳನ್ನು ನಡೆಸುವುದಷ್ಟೇ ಗೊತ್ತಿದೆ. ಆದ್ದರಿಂದ ಈ ಮೂಲನಿವಾಸಿಗಳನ್ನು ಉದ್ಧರಿಸಬೇಕಾಗಿದೆ. ಈ ಉದ್ಧಾರಕ್ಕಾಗಿ ಯಾವ ವಿರೋಧವನ್ನೂ. ಮೂಲ ನಿವಾಸಿಗಳ ವಿರೋಧವನ್ನೂ ಲೆಕ್ಕಿಸದೆ ಮುಂದುವರೆಯಲು'ಸೇವಾತತ್ಪರರು'' ಸಿದ್ಧರಿದ್ದಾರೆ.

ಸ್ವತಃ ಕೈಗೆತ್ತಿಕೊಂಡ ಈ ಐತಿಹಾಸಿಕ ಕರ್ತವ್ಯದ ಹಿಂದೆ ಇರುವ ಉದ್ದೇಶವೇನು? ಚಿರತೆಗಳು ಸುಮ್ಮನೆ ತಮ್ಮ ಕಪ್ಪು ಚುಕ್ಕೆಗಳನ್ನು ಬದಲಾಯಿಸಿಕೊಳ್ಳುವುದಿಲ್ಲ. ನವ ವಸಾಹತುಶಾಹಿಯ ವಿರುದ್ಧ ನಡೆಯುತ್ತಿರುವ ಹೋರಾಟದಲ್ಲಿ ನಾವು ಕಳೆದ 50 ವರ್ಷಗಳಿಂದ ಗಳಿಸಿರುವ ವಿಜಯವನ್ನು ತೊಡೆದು ಹಾಕುವ ಹುನ್ನಾರ ಇದರಲ್ಲಿದೆ. ಮೂರನೇ ಜಗತ್ತಿನ ರಾಷ್ಟ್ರಗಳು ಒತ್ತಾಯಿಸುತ್ತಿದ್ದ ನವ ಅಂತರಾಷ್ಟ್ರೀಯ ಆರ್ಥಿಕ

ವ್ಯವಸ್ಥೆಯ ನಿಯಮಗಳಿಗೆ ಪೂರ್ಣ ತದ್ವಿರುದ್ಧವಾದ ನಿಯಮಗಳನ್ನು ನವವಸಾಹತು ಶಕ್ತಿಗಳು ತರಲು ಹಾತೊರೆಯುತ್ತಿವೆ.

ಬಹುರಾಷ್ಟ್ರೀಯ ಕಂಪನಿಗಳಿಗೆ ಅಂತರ ರಾಷ್ಟ್ರೀಯ ಕಾಯದೆಯನ್ನು ಅನ್ವಹಿಸಬೇಕೆಂದು ಮೂರನೇ ಜಗತ್ತಿನ ರಾಷ್ಟ್ರಗಳು ಒತ್ತಾಯಿಸುತ್ತಿದ್ದವು. ಇದಕ್ಕೆ ವಿರುದ್ಧವಾಗಿ ಬಹುರಾಷ್ಟ್ರೀಯ ಕಂಪನಿಗಳಿಗೆ ಪೂರ್ಣ ಸ್ವಾತಂತ್ರವನ್ನು ಮತ್ತು ರಾಷ್ಟ್ರ ಸರ್ಕಾರಗಳಿಗೆ ನಡೆವಳಿಕೆಗಳ ಕಾಯದೆಯನ್ನು ತರಬೇಕೆಂದು ಅಮೆರಿಕಾ ಬಯಸುತ್ತದೆ. ಅವರ ಪ್ರಕಾರ ವಿದೇಶಿ ಕಂಪನಿಗಳಿಗೂ ಮತ್ತು ಸ್ವದೇಶಿ ಕಂಪನಿಗಳಿಗೂ ಯಾವುದೇ ವ್ಯತ್ಯಾಸವಿರಬಾರದು! ಮೂರನೇ ಜಗತ್ತಿನ ರಾಷ್ಟ್ರಗಳ ಸಾಮೂಹಿಕ ಚೌಕಾಶಿಯ ಒತ್ತಾಯಕ್ಕೆ ಅಮೆರಿಕಾದ ವಿರೋಧವಿದೆ. ರಫ್ತಾಗುವ ವಸ್ತುಗಳ ಬೆಲೆಯನ್ನು ನಾವು ಏರಿಸಬಾರದು. ಆದರೆ ಕೃಷಿ ಮತ್ತು ಖನಿಜ ವಸ್ತುಗಳ ಅಂತರಾಷ್ಟ್ರೀಯ ವ್ಯಾಪಾರ ವಹಿವಾಟನ್ನು ನಿಯಂತ್ರಿಸುವ ಬಹು ರಾಷ್ಟ್ರೀಯ ಕಂಪನಿಗಳು ತಮಗೆ ಇಷ್ಟಬಂದಂತೆ ಮಾರುಕಟ್ಟೆ ನಿಯಮಗಳನ್ನು ಬದಲಿಸಿಕೊಳ್ಳಬಹುದು!

ಮೂರನೇ ಜಗತ್ತಿನ ರಾಷ್ಟ್ರಗಳು ಸ್ಥಳೀಯ ಉತ್ಪಾದನಾ ಸಾಮರ್ಥ್ಯ ಹೆಚ್ಚಿಸಲು ತಂತ್ರಜ್ಞಾನದ ವರ್ಗಾವಣೆಯನ್ನು ಒತ್ತಾಯಿಸಿದ್ದವು. ಆದರೆ ತಂತ್ರಜ್ಞಾನದ ಯಜಮಾನರಿಗೆ (ಬಹುತೇಕ ಬಹುರಾಷ್ಟ್ರೀಯ ಕಂಪನಿಗಳಿಗೆ) ಹೆಚ್ಚು ಅನುಕೂಲವಿರುವ ಅಮೆರಿಕಾ ದೇಶದ ಸ್ವಾಮ್ಯ (ಪೇಟೆಂಟ್) ಕಾಯದೆಯನ್ನು ಸಾರ್ವತ್ರಿಕರಿಸಲು ಅಮೆರಿಕಾ ಬಯಸುತ್ತದೆ. ಇದರಿಂದ ಮೂರನೇ ಜಗತ್ತಿನ ರಾಷ್ಟ್ರಗಳು ತಂತ್ರಜ್ಞಾನಕ್ಕೆ ಪೂರ್ಣ ಪರಾವಲಂಬಿತ ದೇಶಗಳಾಗಬೇಕಾಗುತ್ತದೆ. ಅಮೆರಿಕಾದವರಿಗೆ ನಮ್ಮ ಅನುವಂಶೀಯ ಸಂಪನ್ಮೂಲಗಳನ್ನು ಪಡೆಯಲು ತೆರದ ಅವಕಾಶವಿರಬೇಕಂತೆ. ಆದರೆ ಅವರು ಸಿದ್ಧಪಡಿಸುವ ಹೊಸ ಬೀಜಗಳಿಗೆ ಅಥವಾ ಜೀವಿ ವಿಧಗಳ ಮೇಲೆ ಅವರಿಗೇ ಪೂರ್ಣ ಹತೋಟಿಯಿರಬೇಕಂತೆ! ಹೀಗಿದೆ ಅವರ ವಾದಸರಣಿ!!

ಸಾಲ ಕಡಿಮೆ ಮಾಡುವುದು ಮತ್ತು ಸಹಾಯ ಧನ ನೀಡಬೇಕೆನ್ನುವುದು ಮೂರನೇ ಜಗತ್ತಿನ ರಾಷ್ಟ್ರಗಳ ಮತ್ತೊಂದು ಒತ್ತಾಯ. ಆದರೆ ಸಾಲ ಮರುಪಾವತಿ ಮಾಡಿ ಸಾಲದ ಹೊರೆ ಕಡಿಮೆ ಮಾಡಿಕೊಳ್ಳಬೇಕೆಂದು ಅಮೆರಿಕಾದ ಸಲಹೆ. ಕಳೆದ ದಶಕದಲ್ಲಿ ಮೂರನೇ ಜಗತ್ತಿನ ರಾಷ್ಟ್ರಗಳಿಂದ ಸಾಲದ ಮರುಪಾವತಿ ಮತ್ತು ಬಡ್ಡಿ ತೆರವುದರಿಂದ ಅಪಾರ ಪ್ರಮಾಣದ ಹಣದ ಹೊಳೆ ಹೊರಕ್ಕೆ ಹರಿದಿದೆ. ಆದರೂ ಅಭಿವೃದ್ಧಿಯಾಗಿರುವ ರಾಷ್ಟ್ರಗಳು ಕಡಿಮೆ ದರದ ಸಾಲ ನೀಡಲು ನಿರಾಕರಿಸಿವೆ. ಆದರೆ ಅಭಿವೃದ್ಧಿ ಯೋಜನೆಗಳಿಗೆ ವಾಣಿಜ್ಯ ಸಾಲದ ಆಸೆ ತೋರಿಸುತ್ತಿವೆ.

ಮೂರನೇ ಜಗತ್ತಿನ ರಾಷ್ಟ್ರಗಳು ತಮ್ಮ ಹೊಸ ಕೈಗಾರಿಕೆಗಳಿಗೆ ರಕ್ಷಣೆ ಕೋರಿದ್ದವು. ಆದರೆ ನವ ಜಾಗತಿಕ ವ್ಯವಸ್ಥೆಯ ಆದೇಶದಂತೆ ಯಾವುದು ಅಂತರರಾಷ್ಟ್ರೀಯ

ಸ್ಪರ್ಧೆಯಲ್ಲಿ ಉಳಿಯಬಲ್ಲದೋ, ಅದು ಮಾತ್ರ ಉಳಿಯಬೇಕು.

ಅಂತರಾಷ್ಟ್ರೀಯ ಸಂಸ್ಥೆಗಳ ನಿರ್ವಹಣೆ, ಪ್ರಜಾಪ್ರಭುತ್ವ ರೀತಿಯಲ್ಲಿರಬೇಕೆಂಬ ಮೂರನೇ ಜಗತ್ತಿನ ರಾಷ್ಟ್ರಗಳ ಬೇಡಿಕೆಯನ್ನು ಅಮೆರಿಕಾ ತಿರಸ್ಕರಿಸಿದೆ. ಒಂದು ದೇಶಕ್ಕೆ ಒಂದು ಮತವಿರಬೇಕೆಂಬ ವಿಶ್ವ ಸಂಸ್ಥೆಯ ಸಲಹೆಯನ್ನು ಕಡೆಗಣಿಸಿದೆ.

ಕಳೆದ ಎರಡು ದಶಕಗಳಿಂದ ಅಭಿವೃದ್ಧಿ ಹೊಂದಿದ ದೇಶಗಳು ತೀವ್ರವಾದ ಆರ್ಥಿಕ ಸಮಸ್ಯೆಗಳನ್ನು ಎದುರಿಸುತ್ತಿವೆ. ಅವುಗಳ ಸರಾಸರಿ ಆರ್ಥಿಕ ಪ್ರಗತಿಯು ಐವತ್ತು ಹಾಗೂ ಅರವತ್ತರ ದಶಕಗಳಿಗೆ ಹೋಲಿಸಿದರೆ ಇಂದು ಅರ್ಧದಷ್ಟು ಕಡಿಮೆಯಾಗಿದೆ. ಅದರ ಪ್ರಯುಕ್ತ ನಿರುದ್ಯೋಗ ಹೆಚ್ಚುತ್ತಿದೆ. ಇಂದು ಶ್ರೀಮಂತ ರಾಷ್ಟ್ರಗಳಲ್ಲಿ $3\frac{1}{2}$ ಕೋಟಿಗೂ ಹೆಚ್ಚು ಜನ ನಿರುದ್ಯೋಗಿಗಳಿದ್ದಾರೆ. ಅಲ್ಲದೆ ವಸ್ತುಗಳ ಬೆಲೆ ಏರಿಕೆ ಮುಂದುವರಿಯುತ್ತಿದೆ. ಆರ್ಥಿಕ ಹಾಗೂ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ತೀವ್ರ ಬಿಕ್ಕಟ್ಟು ಉಂಟಾಗಿದೆ. ಯೂರೋಪಿನಲ್ಲಿನ ಸಮಾಜವಾದದ ಪತನವೂ ಈ ಬಿಕ್ಕಟ್ಟನ್ನು ನಿವಾರಿಸುವುದಕ್ಕೆ ಸಾಧ್ಯವಾಗಿಲ್ಲ.

ಮೇಲೆ ಸೂಚಿಸಿರುವ ಕಾರಣಗಳಿಂದ ಸಾಮ್ರಾಜ್ಯಶಾಹಿ ಶಕ್ತಿಗಳು ಅಂತರಾಷ್ಟ್ರೀಯ ಆರ್ಥಿಕ ರಚನೆಯನ್ನು ಪೂರ್ಣ ಬದಲಾಯಿಸಲು ಅತ್ಯಂತ ಕೇಡಿನ ಪ್ರಯತ್ನಗಳನ್ನು ಮಾಡುತ್ತಿದೆ. ಯಾವುದೇ ರಾಷ್ಟ್ರೀಯ ಆರ್ಥಿಕ ನಿರ್ಬಂಧವಿಲ್ಲದ ಹಾಗೂ ಅವರ ನಿಯಂತ್ರಣದಲ್ಲಿರುವ ಜಾಗತಿಕ ಆರ್ಥಿಕ ವ್ಯವಸ್ಥೆಯನ್ನು ರಚಿಸಲು ಅಮೆರಿಕಾ ಪ್ರಯತ್ನಿಸುತ್ತಿದೆ. ಇದರಿಂದ ಬಹುರಾಷ್ಟ್ರೀಯ ಕಂಪನಿಗಳು ವಿವಿಧ ದೇಶಗಳಿಗೆ ಸ್ವಚ್ಛಂದವಾಗಿ ಬಂದು ಹೋಗುವ; ಕೈಗಾರಿಕೆಗಳನ್ನು ಬದಲಾಯಿಸುವ ಮತ್ತು ಹೆಚ್ಚು ಲಾಭತರುವ ಜಾಗತಿಕ ಸಂಕೀರ್ಣ ವ್ಯವಸ್ಥೆಯನ್ನು ರಚಿಸಲು ಮುಕ್ತ ಅವಕಾಶ ದೊರೆಯುತ್ತದೆ. ವಸ್ತುಗಳ ಮುಕ್ತ ವ್ಯಾಪಾರವಿರುವಂತೆ ಅವರಿಗೆ ಸೇವಾ ಕ್ಷೇತ್ರಗಳು ಮುಕ್ತವಾಗಿರಬೇಕು. ಮೂರನೇ ಜಗತ್ತಿನ ರಾಷ್ಟ್ರಗಳಲ್ಲಿರುವ ಬ್ಯಾಂಕು ಹಾಗೂ ಜೀವ ವಿಮೆ ಕ್ಷೇತ್ರಗಳನ್ನು ಲಪಟಾಯಿಸಲು ಸಿದ್ಧತೆ ನಡೆಯುತ್ತಿದೆ. ತಳಿ ತಂತ್ರಜ್ಞಾನ, ಸೂಕ್ಷ್ಮ ವಿದ್ಯುನ್ಮಾನ(ಎಲೆಕ್ಟ್ರಾನಿಕ್ಸ್) ಮುಂತಾದ ಹೊಸ ತಂತ್ರಜ್ಞಾನಗಳಿಂದ ಕೈಗಾರಿಕೆ ಹಾಗೂ ಕೃಷಿ ಕ್ಷೇತ್ರಗಳಲ್ಲಿ ಕ್ರಾಂತಿಕಾರಕ ಬದಲಾವಣೆಗಳಾಗುತ್ತಿವೆ. ಹೊಸ ಕೈಗಾರಿಕಾ ಕ್ರಾಂತಿ ಪ್ರಾರಂಭವಾಗಿದೆ. 'ಜ್ಞಾನವೇ ಸಂಪತ್ತು' ಎಂಬ ಹೇಳಿಕೆಯ ಸತ್ಯ ಇಂದಿರುವಷ್ಟು ಇತಿಹಾಸದ ಮತ್ತಾವ ಕಾಲದಲ್ಲೂ ಇರಲಿಲ್ಲ. ಆದ್ದರಿಂದ ಜ್ಞಾನಕ್ಕೆ ಖಾಸಗಿ ಸ್ವತ್ತಿಗೆ ಇರುವಷ್ಟು ಪೂರ್ಣ ಹಕ್ಕುಗಳನ್ನು ನೀಡಲು, ಎಲ್ಲ ದೇಶಗಳಲ್ಲಿ ಕಾಯದೆಗಳನ್ನೂ ತುರ್ತಾಗಿ ಜಾರಿ ಮಾಡಬೇಕಾಗಿದೆ. ಇದನ್ನು ಖಾತ್ರಿಗೊಳಿಸಲು ಮೂರನೇ ಜಗತ್ತಿನ ರಾಷ್ಟ್ರಗಳ ಸ್ವಾಮ್ಯ ಕಾಯದೆಗಳನ್ನು ಬದಲಾಯಿಸಬೇಕಾಗಿದೆ. ಹೀಗೆ ಅವರ ವಾದ ಮುಂದುವರೆಯುತ್ತದೆ.

## ಏಕೆ ಈ ಅಸಹಾಯಕ ಹಿನ್ನೆಡೆ?

ಸಾಮ್ರಾಜ್ಯಶಾಹಿಗಳು ಕೈಗೊಳ್ಳುತ್ತಿರುವ ಕ್ರಮಗಳಿಗೆ ಅವರದೇ ಆದ ತರ್ಕವಿದೆ. ಆದರೆ ನಮ್ಮ ರಾಷ್ಟ್ರ ನಾಯಕರೆನ್ನಿಸಿಕೊಳ್ಳುವವರಲ್ಲಿ ಕೆಲವರು ಸಾಮ್ರಾಜ್ಯಶಾಹಿ ಜಾಗತೀಕರಣಕ್ಕೆ ಏಕೆ ಪೂರ್ಣ ಪ್ರೋತ್ಸಾಹ ನೀಡಲು ಪ್ರಾರಂಭಿಸಿದ್ದಾರೆ ? ವಸಾಹತು ಆಡಳಿತದಿಂದ ನಾವು ಕಲಿತ ಪಾಠವನ್ನು ಅಥವಾ ವಿಶ್ವದ ವೇದಿಕೆಗಳಲ್ಲಿ ಅವರು ಮಂಡಿಸುತ್ತಿದ್ದ ವಾದವನ್ನು ಅಷ್ಟು ಬೇಗ ಹೇಗೆ ಮರೆತರು? ಅವರನ್ನು ಬಲಹೀನರನ್ನಾಗಿ ಮಾಡಿರುವುದಾದರೂ ಏನು? ಅವರ ಅಸಹಾಯಕತೆಯನ್ನು ಅರ್ಥಮಾಡಿಕೊಳ್ಳಲು ಸ್ವಾತಂತ್ರೋತ್ತರದ ಆರ್ಥಿಕ ಬೆಳವಣಿಗೆಯನ್ನು ನಾವು ವಿಮರ್ಶಾತ್ಮಕವಾಗಿ ಪರೀಕ್ಷಿಸಬೇಕಾಗಿದೆ. ನಮ್ಮ ಆರ್ಥಿಕ ರಂಗದಲ್ಲಿ ಎರಡು ಮೂಲಭೂತ ವೈರುಧ್ಯಗಳು ಬೆಳೆಯುತ್ತಿದ್ದು. ಇಂದು ಅವು ಪೂರ್ಣ ಪ್ರಮಾಣದ ಬಿಕ್ಕಟ್ಟಿಗೆ ಕಾರಣವಾಗಿವೆ. ಒಂದು ಕಡೆ ನಮ್ಮ ಸರ್ಕಾರವು ಆದಾಯಕ್ಕಿಂತ ಹೆಚ್ಚು ಹಣವನ್ನು ಖರ್ಚುಮಾಡುತ್ತಿತ್ತು. ಮತ್ತೊಂದು ಕಡೆ ನಮ್ಮ ರಾಷ್ಟ್ರವು ಒಟ್ಟು ಉತ್ಪಾದನೆಗಿಂತ ಹೆಚ್ಚಿನ ವೆಚ್ಚ ಮಾಡುತ್ತಿತ್ತು. ಆದಾಯ ಹಾಗೂ ವೆಚ್ಚಗಳ ನಡುವಿನ ಈ ಅಂತರ ದಿನೇ ದಿನೇ ಹೆಚ್ಚಾಗುತ್ತಾ ಕುಸಿದು ಹೋಗುವ ಅಂಚಿಗೆ ಬಂದಿತ್ತು. ಇಂಥಹ ಸ್ಥಿತಿಯು ಬದಲಾದ ಅಂತರಾಷ್ಟ್ರೀಯ ಪರಿಸರದಲ್ಲೂ ತೀವ್ರ ಅಸಹಾಯಕತೆಯನ್ನುಂಟು ಮಾಡುತ್ತದೆ. ನಮ್ಮ ದೇಶದಲ್ಲಿ ಕೈಗೊಳ್ಳಲಾದ ಪ್ರಗತಿಯ ರೀತಿ ನೀತಿಗಳು ರಾಷ್ಟ್ರದ ಸ್ವಾತಂತ್ರ್ಯಕ್ಕೆ ಭದ್ರವಾದ ಆರ್ಥಿಕ ಬುನಾದಿಯನ್ನು ಕಟ್ಟುವಲ್ಲಿ ಸೋತವು.

1947ರ ನಂತರ ನಮ್ಮಲ್ಲಿ ಯಾವುದೂ ಬದಲಾಗಿಲ್ಲ ಅಥವಾ ಪ್ರಗತಿ ಸಾಧಿಸಿಲ್ಲ ಎಂಬ ವಾದವನ್ನೇನು ನಾವು ಮಾಡುತ್ತಿಲ್ಲ. ಹಿಂದಿನ ಪುಟಗಳ ಚರ್ಚೆಯನ್ನು ಗಮನಿಸಿದಾಗ ನಾವು ಇತಿಹಾಸವನ್ನು ತಿರುಚಲು ಪ್ರಯತ್ನಿಸಿದ್ದೇವೆಂದು ಆರೋಪ ಮಾಡಲು ಸಾಧ್ಯವಿಲ್ಲ. ಕೆಲವು ಪ್ರದೇಶಗಳಿಗೆ ಸೀಮಿತವಾದರೂ ಕೃಷಿ ಉತ್ಪಾದನೆಯಲ್ಲಿ ಹೆಚ್ಚಳವಾಗಿದೆ. ಹೊಸ ರೀತಿಯ ಕೈಗಾರಿಕೆಗಳು ಅಸ್ತಿತ್ವಕ್ಕೆ ಬಂದಿವೆ. ಮೂರನೇ ಜಗತ್ತಿನ ರಾಷ್ಟ್ರಗಳಲ್ಲಿಯೇ ಬೃಹತ್ ತಂತ್ರಜ್ಞಾನದ ಮಾನವ ಸಂಪನ್ಮೂಲ ನಮ್ಮ ದೇಶದಲ್ಲಿದೆ. ಬ್ರಿಟೀಷರ ಆಡಳಿತದಲ್ಲಿ ಸಾಧಿಸಿದ ಪ್ರಗತಿಗೆ ಹೋಲಿಸಿದರೆ ಒಟ್ಟಾರೆ ನಾವು ಮೂರು ಪಟ್ಟು ವೇಗವಾಗಿ ಆರ್ಥಿಕ ಪ್ರಗತಿ ಸಾಧಿಸಿದ್ದೇವೆ. ಆದರೆ ಜಮೀನುದಾರರು ಮತ್ತು ಗುತ್ತೇದಾರಿ ಬಂಡವಾಳಗಾರರನ್ನು ಅವಲಂಬಿಸಿದ ಪ್ರಗತಿಯ ಮಾರ್ಗಕ್ಕೆ ಪ್ರಮುಖವಾದ ಮಿತಿಯಿತ್ತು. ತತ್ಪರಿಣಾಮ ಪ್ರಗತಿಯ ಅನುಕೂಲಗಳು ಬಹುಸಂಖ್ಯಾತ ಜನರಿಗೆ ತಲುಪಲಿಲ್ಲ. ಆದ್ದರಿಂದ ಅನಕ್ಷರಸ್ಥರಾದ. ಅನಾರೋಗ್ಯ ಹೊಂದಿದ. ನಿರಾಶ್ರಿತರಾದ ಮತ್ತು ಬಡತನದಲ್ಲಿ ತೊಳಲಾಡುವ ಜನತೆಯು ನಮ್ಮ ದೇಶದ ಖಾಯಂ ಲಕ್ಷಣವಾಯಿತು. ಬಹುಸಂಖ್ಯಾತ ಜನರ ಬಡತನ ಹೆಚ್ಚುತ್ತಾ ಹೋಗುವುದು ಮತ್ತು ಅತಿ ಕಡಿಮೆ ಸಂಖ್ಯೆ ಜನರು ಹೆಚ್ಚೆಚ್ಚು ಶ್ರೀಮಂತರಾಗುವುದು ನಮ್ಮ ದೇಶದ ಅಭಿವೃದ್ಧಿಯ ಅನುಭವದ ಪ್ರಮುಖ ಲಕ್ಷಣವಾಯಿತು.

ಅಗತ್ಯವಾದ ಸಂಪನ್ಮೂಲಗಳನ್ನು ಕ್ರೋಢೀಕರಿಸಲು ಅಥವಾ ರಾಷ್ಟ್ರದ ಆದ್ಯತೆಗಳಿಗೆ ಅನುಗುಣವಾಗಿ ವರ್ತಿಸುವಂತೆ ಮಾಡಲು ನಮ್ಮ ಸರ್ಕಾರಗಳು ಅಲ್ಪ ಸಂಖ್ಯೆಯ ಈ ಶ್ರೀಮಂತರ ಮೇಲೆ ಅವಲಂಬಿಸಬೇಕಾಯಿತು. ಸರ್ಕಾರದ ಆರ್ಥಿಕ ಕುಸಿತವನ್ನೇ ತೆಗೆದುಕೊಳ್ಳೋಣ. ಸ್ವತಂತ್ರ ಭಾರತದಲ್ಲಿ ಆರ್ಥಿಕ ಬೆಳವಣಿಗೆಯ ವಿಧಾನದಲ್ಲಿ ಸರ್ಕಾರದ ಪ್ರಮುಖ ಪಾತ್ರವನ್ನು ಈಗಾಗಲೇ ಚರ್ಚಿಸಿದ್ದೇವೆ. ಶ್ರೀಮಂತ ವರ್ಗ ಸಕ್ರಿಯವಾದ ಪಾತ್ರ ವಹಿಸಿದ್ದಲ್ಲಿ ಸರ್ಕಾರದ ವೆಚ್ಚ ತೀವ್ರ ಪ್ರಮಾಣದಲ್ಲಿ ಹೆಚ್ಚಾಗಬೇಕಿತ್ತು. ರಾಷ್ಟ್ರೀಯ ವರಮಾನದ ಸೇಕಡಾ 30ರಷ್ಟು ಹಣವನ್ನು ಇಂದು ಸರ್ಕಾರವೆ ವೆಚ್ಚಮಾಡುತ್ತಿದೆ. ಆರ್ಥಿಕ ಬೆಳವಣಿಗೆಯನ್ನು ಹೆಚ್ಚಿಸುವಲ್ಲಿ ಸರ್ಕಾರದ ವೆಚ್ಚದಲ್ಲಿನ ಹೆಚ್ಚಳ ಪ್ರಮುಖ ಪಾತ್ರ ವಹಿಸುತ್ತದೆ. ಆದರೆ ವೆಚ್ಚದಲ್ಲಿ ಹೆಚ್ಚಳ ಮುಂದುವರೆಸಲು ಸರ್ಕಾರದ ಆದಾಯಲ್ಲಿಯೂ ಹೆಚ್ಚಳವಿರಬೇಕು. ಈ ರೀತಿಯ ಸಮನಾದ ಬೆಳವಣಿಗೆ ಸಾಧಿಸಲಾಗಲಿಲ್ಲ.

ಸರ್ಕಾರದ ಆದಾಯಲ್ಲಿ ಪ್ರಮುಖ ಸಂಪನ್ಮೂಲವಾದ ತೆರಿಗೆಗಳಿಂದ ಬರುವ ಹಣದ ಸೇಕಡಾ 88ರಷ್ಟನ್ನು 1960 – 61ರಲ್ಲಿ ಸರ್ಕಾರದ ವೆಚ್ಚಕ್ಕೆ ಬಳಸಲಾಯಿತು. ಇಂದು ತೆರಿಗೆಗಳಿಂದ ಬರುವ ಆದಾಯ ಸೇಕಡಾ 59ಕ್ಕೂ ಕಡಿಮೆ ಇದೆ. ಖರ್ಚು ವೆಚ್ಚ ಏರಿದಂತೆ ತೆರಿಗೆಗಳಿಂದ ಬರುವ ಆದಾಯ ಏಕೆ ಹೆಚ್ಚಲಿಲ್ಲ? ಕಾರಣ ಸರಳ – ಸರ್ಕಾರದ ಪ್ರಗತಿಯ ವಿಧಾನಗಳಿಂದ ಅನುಕೂಲ ಪಡೆದು ಶ್ರೀಮಂತರಾದವರ ಮೇಲೆ ತೆರಿಗೆ ಹಾಕುವಲ್ಲಿ ಸರ್ಕಾರ ವಿಫಲವಾಯಿತು. ಈ ಕೆಳಗಿನ ಅಂಶಗಳನ್ನು ಗಮನಿಸಿ. ಸ್ವತಂತ್ರ ಭಾರತದಲ್ಲಿ ಶ್ರೀಮಂತರು ಹೆಚ್ಚು ಶ್ರೀಮಂತರಾಗಿದ್ದಾರೆ. ರಾಷ್ಟ್ರೀಯ ವರಮಾನದಲ್ಲಿ ಉಳಿತಾಯದ ಪ್ರಮಾಣವು 1950 – 51ರಲ್ಲಿ ಸೇಕಡಾ 10.4 ಇದ್ದುದು 1989 – 90ರಲ್ಲಿ ಸೇಕಡಾ 22ರಷ್ಟಕ್ಕೆ ಹೆಚ್ಚಾಗಿದೆ. ತೆರಿಗೆ ನೀಡಲು ಸಾಧ್ಯವಿರುವ ಜನರು ತೆರಿಗೆ ಕೊಡುತ್ತಿದ್ದಾರೆಯೇ? ಇದೇ ಕಾಲಘಟ್ಟದಲ್ಲಿ ಶ್ರೀಮಂತರು ನೇರವಾಗಿ ನೀಡುವ ವರಮಾನ ಮತ್ತು ಆಸ್ತಿ ಪಾಸ್ತಿಯ ತೆರಿಗೆಯ ಪ್ರಮಾಣವು ಸೇಕಡಾ 12.4 ರಿಂದ 1.6ಕ್ಕೆ ಇಳಿದಿದೆ. ಅನ್ಯ ದೇಶಗಳಲ್ಲಿ ಶ್ರೀಮಂತರು ಅವರವರ ದೇಶಕ್ಕೆ ನೀಡುತ್ತಿರುವಷ್ಟು ತೆರಿಗೆಯನ್ನು ನಮ್ಮ ದೇಶದಲ್ಲಿನ ಶ್ರೀಮಂತರು ನೀಡುತ್ತಿಲ್ಲವೆಂಬುದು ಸತ್ಯದ ವಿಷಯ. *ಮೂರನೇ ಜಗತ್ತಿನ ರಾಷ್ಟ್ರಗಳಲ್ಲಿ ಸರ್ಕಾರಕ್ಕೆ ಬರುವ ತೆರಿಗೆ ರೂಪದ ಆದಾಯಲ್ಲಿ ಶ್ರೀಮಂತರ ಪಾಲು ಸರಾಸರಿ ಸೇಕಡಾ 35ರಷ್ಟು. ಆದರೆ ಭಾರತದಲ್ಲಿ ಅವರ ಪಾಲು ಕೇವಲ 18 ರಷ್ಟು ಇದೆ. ಅಲ್ಲದೆ ಸುಮಾರು 40% ತೆರಿಗೆಯನ್ನು ಶ್ರೀಮಂತರು ಕದಿಯುತ್ತಿದ್ದಾರೆಂದು ಹಣಕಾಸು ಮಂತ್ರಿಯವರೇ ಒಪ್ಪಿಕೊಂಡಿದ್ದಾರೆ.*

ಖರ್ಚು ವೆಚ್ಚವಾಗುವಷ್ಟು ಆದಾಯ ಬರದಿದ್ದರೆ ಸರ್ಕಾರವು ಸಂಪನ್ಮೂಲಗಳನ್ನು ಕ್ರೋಢೀಕರಿಸುವುದಾದರೂ ಹೇಗೆ? ಸರ್ಕಾರವು ಸುಲಭದ ಮಾರ್ಗ ಹಿಡಿಯಿತು. ಅವರು ಹೆಚ್ಚು ಹಣವನ್ನು ಮುದ್ರಿಸಿದರು ಅಥವಾ ಶ್ರೀಮಂತರಿಂದ ಸಾಲ ಪಡೆದರು. ಹೆಚ್ಚೆಚ್ಚು

ಹಣ ಮುದ್ರಿಸಿದಂತೆ ಬೆಲೆ ಏರಿಕೆ, ಹಣದುಬ್ಬರ ಹೆಚ್ಚಾಗುತ್ತದೆ. ಆದ್ದರಿಂದ ಹಣದ ಅಗತ್ಯ ಬಿದ್ದಾಗಲೆಲ್ಲಾ ಸಾಲವನ್ನು ಅವಲಂಬಿಸಬೇಕಾಯಿತು. ಒಂದು ವೇಳೆ ಸಾಲವನ್ನು ಉತ್ಪಾದನಾ ಬಂಡವಾಳಕ್ಕೆ ಹೂಡಿದರೆ, ಪರವಾಯಿಲ್ಲ, ಬಂದಂತ ಉತ್ಪಾದನೆಯಿಂದ ಸಾಲ ಹಿಂದಿರುಗಿಸಬಹುದು. ಆದರೆ ಸಾಲ ಪಡೆಯುವಾಗ ಯಾವುದನ್ನೂ ಪರಿಗಣಿಸಲಿಲ್ಲ. ಸರ್ಕಾರ ದಿನನಿತ್ಯದ ವೆಚ್ಚಗಳಿಗೂ ಮಾರುಕಟ್ಟೆಯಲ್ಲಿ ಸಾಲ ಮಾಡಿತು. ಸರ್ಕಾರವು ಹೆಚ್ಚೆಚ್ಚು ಸಾಲ ಪಡೆದಂತೆ, ಪ್ರತಿ ವರ್ಷ ನೀಡಬೇಕಾದ ಬಡ್ಡಿಯ ಪ್ರಮಾಣ ಹೆಚ್ಚುತ್ತಾ ಹೋಯಿತು. ತೆರಿಗೆಯ ಆದಾಯದಲ್ಲಿ ಅರ್ಧದಷ್ಟು ಹಣವನ್ನು ಕೇವಲ ಬಡ್ಡಿ ಕೊಡುವುದಕ್ಕೇ ವಿನಿಯೋಗಿಸಬೇಕಾಯಿತು. ಈ ಸ್ಥಿತಿಯು ಆತಂಕಕಾರಿಯಾಗಿ, ಸರ್ಕಾರ ಬದುಕುವುದೇ ಕಷ್ಟಕರವಾಯಿತು! ತುರ್ತಾಗಿ ಈ ಆತಂಕಕಾರಿ ಪರಿಸ್ಥಿತಿ ನಿವಾರಿಸುವುದಕ್ಕೆ ಯುಕ್ತ ಕ್ರಮಗಳನ್ನು ಕೈಗೊಳ್ಳಬೇಕಾಯಿತು.

ಕಳೆದ ಮೂರು ಬಜೆಟ್‌ಗಳಲ್ಲಿ ಹಣಕಾಸು ಮಂತ್ರಿ ಕೈಗೊಂಡ ಕ್ರಮಗಳೇನು? ಸರ್ಕಾರದ ವರಮಾನಕ್ಕೆ ಸಾಲ ಮಾಡುವುದು ಸರಿಯಾದ ಸಂಪನ್ಮೂಲವಲ್ಲವೆಂದು ತೀರ್ಮಾನಿಸಲಾಗಿದೆ. ಅತ್ಯಂತ ಕಡಿಮೆ ಸಮಯದಲ್ಲಿ ಸಾಲ ಪಡೆಯುವುದನ್ನು ತೀವ್ರ ಕಡಿತಗೊಳಿಸಬೇಕು. ಕಡಿತ ಮಾಡುವುದಾದರೂ ಹೇಗೆ? ಶ್ರೀಮಂತರಿಗೆ ತೆರಿಗೆ ಹಾಕುವುದು ಮತ್ತು ತೆರಿಗೆ ಕಳ್ಳರನ್ನು ಪತ್ತೆ ಹಚ್ಚಿ ತೆರಿಗೆ ಸಂಗ್ರಹಿಸುವುದೇ? ಇಲ್ಲ. ಹಣಕಾಸು ಮಂತ್ರಿಗಳು ಈ ಬಗ್ಗೆ ಸೊಲ್ಲೆತ್ತುತ್ತುವುದಿಲ್ಲ. ಒಂದು ವೇಳೆ ಇಂಥ ಕ್ರಮ ಕೈಗೊಂಡರೆ ಶ್ರೀಮಂತರ ಹಣ ಸಂಗ್ರಹಿಸುವ ಆಸೆ ಕಡಿಮೆ ಮಾಡಲು ಬುರುಕತನವನ್ನು ಮತ್ತು ಭವಿಷ್ಯದಲ್ಲಿ ಆರ್ಥಿಕ ಪ್ರಗತಿ ಸಾಧಿಸಲು ಸಾಧ್ಯವಾಗುತ್ತದೆ. ಆದರೆ ಇವರು ಸರ್ಕಾರದ ಆದಾಯವನ್ನು ಹೆಚ್ಚಿಸಲು ಕಳೆದ ನಲವತ್ತು ವರ್ಷಗಳಿಂದ ಕ್ರೋಢೀಕರಿಸಿರುವ ಆಸ್ತಿ ಪಾಸ್ತಿಗಳನ್ನು ಮಾರುವ ಮತ್ತು ಸಾರ್ವಜನಿಕ ಸೇವೆ ಹಾಗೂ ವಸ್ತುಗಳ ಬೆಲೆ ಏರಿಸುವ ಕ್ರಮ ಕೈಗೊಳ್ಳುತಿದ್ದಾರೆ. ಇದರ ಜೊತೆಗೆ ಖರ್ಚು ವೆಚ್ಚ ತಗ್ಗಿಸಲು ಹಲವಾರು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಕೃಷಿ ಕ್ಷೇತ್ರಕ್ಕೆ ಮತ್ತು ಬಡವರಿಗೆ ನೀಡಲಾಗುತ್ತಿದ್ದ ಸಬ್ಸಿಡಿ ನಿಲ್ಲಿಸುವ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳ ವೆಚ್ಚ ಕಡಿಮೆ ಮಾಡುವ ಕ್ರಮ ಕೈಗೊಳ್ಳಲಾಗುತ್ತಿದೆ.

ಈ ಕ್ರಮಗಳಿಂದ ಉಂಟಾಗುವ ಪರಿಣಾಮವೇನು? ಇದರಿಂದ ಸರ್ಕಾರದ ವೆಚ್ಚದಲ್ಲಿ ಕಡಿತ ಉಂಟಾಗುತ್ತದೆ. ಇದರಿಂದ ದೇಶದ ಅಭಿವೃದ್ಧಿಯಲ್ಲಿ ಯೋಜನೆಗಳ ಮತ್ತು ಸಾರ್ವಜನಿಕ ಉದ್ಯಮಗಳ ಪಾತ್ರ ಪ್ರಮುಖವೆಂದು ಪರಿಗಣಿಸಿದ್ದ ರಾಷ್ಟ್ರೀಯ ಧ್ಯೇಯಕ್ಕೆ ತಿಲಾಂಜಲಿ ನೀಡಿದಂತಾಗುತ್ತದೆ. ಒಟ್ಟಾರೆಯಾಗಿ ಶ್ರೀಮಂತರಿಂದ ಸಂಪನ್ಮೂಲಗಳನ್ನು ಸಂಗ್ರಹಿಸಲು ಹಿಂದೇಟು ಹಾಕುತ್ತಿರುವ ಸರ್ಕಾರದ ನೀತಿಯಿಂದ, ದೇಶದ ಅಭಿವೃದ್ಧಿಯಲ್ಲಿ, ಸರ್ಕಾರ ನಿರ್ವಹಿಸಬೇಕಾಗಿದ್ದ ಪ್ರಮುಖ ಪಾತ್ರ ಕೊನೆಗೊಂಡಿದೆ.

## ಸಾಲದ ಶೂಲದಲ್ಲಿ ಭಾರತ

ಆರ್ಥಿಕ ವ್ಯವಸ್ಥೆಯಲ್ಲಿನ ಎರಡನೇ ಮುಖ್ಯ ಅಸಮತೋಲವು ಮತ್ತಷ್ಟು ತೀವ್ರವಾದುದು. ನಾವು ರಫ್ತು ಮಾಡುವುದಕ್ಕಿಂತ ಹೆಚ್ಚು ಆಮದುಮಾಡಿಕೊಳ್ಳುತ್ತಿದ್ದೇವೆ. ರಫ್ತು – ಆಮದುಗಳಲ್ಲಿನ ವ್ಯತ್ಯಾಸ ಎಂಬತ್ತರ ದಶಕದಲ್ಲಿ ಅತಿ ಹೆಚ್ಚಾಯಿತು. ಅದು ಹೇಗೆ? ಸ್ವಾತಂತ್ರ್ಯ ಬಂದಾಗ ನಾವು ಆಮದಿನ ಪ್ರಮಾಣವನ್ನು ಕಡಿಮೆ ಮಾಡಲು ತೀರ್ಮಾನಿಸಲಿಲ್ಲವೇ? ಹೌದು ತೀರ್ಮಾನಿಸಿದೆವು. ಆದರೆ ಈ ಧ್ಯೇಯಕ್ಕೆ ಎಂಬತ್ತರಲ್ಲಿ ತಿಲಾಂಜಲಿ ನೀಡಲಾಯಿತು. ಏಕೆಂದರೆ ಪ್ರಗತಿಯ ವೇಗ ಹೆಚ್ಚಿಸಬೇಕೆಂದರೆ ಆಮದಿನ ವಿಧಾನ ಸರಳಗೊಳಿಸಬೇಕೆಂದು ಆರ್ಥಿಕ ತಜ್ಞರ ಅಭಿಪ್ರಾಯವಾಗಿತ್ತು!

ಆಂತರಿಕ ಮಾರುಕಟ್ಟೆಯ ಮೇಲೆ ಪ್ರಮುಖವಾಗಿ ಅವಲಂಬಿಸಿ ಪ್ರಗತಿ ಸಾಧಿಸುವ ಮಾರ್ಗವೂ ಸಹ ಕೊನೆ ಮುಟ್ಟಿತ್ತು. ಎರಡು ದಶಕಗಳ ಯೋಜನಾ ಬದ್ಧವಾದ ಪ್ರಗತಿ ಸಾಧಿಸಿದರೂ ಸಹ. ಭಾರತದ ಜನಸಂಖ್ಯೆಯಲ್ಲಿ ಶೇಕಡ 40ಕ್ಕೂ ಹೆಚ್ಚು ಜನ ಬಡತನದ ರೇಖೆಗಿಂತ ಕೆಳಗಿನ ಮಟ್ಟದಲ್ಲಿ ಜೀವಿಸುತ್ತಿದ್ದಾರೆ. ಅಗತ್ಯವಿರುವ ಆಹಾರವನ್ನು ಕೊಳ್ಳುವ ಶಕ್ತಿಯೂ ಅವರಿಗಿಲ್ಲ. ಹಾಗಿದ್ದಾಗ ಅವರು ಬಟ್ಟೆ, ಬೈಸಿಕಲ್, ರೇಡಿಯೋ ಮುಂತಾದ ವಸ್ತುಗಳನ್ನು ಹೇಗೆ ಕೊಳ್ಳುವರು? ದೇಶದ ಪ್ರಗತಿ ಅವರನ್ನು ಕಡೆಗಣಿಸಿದೆ. ಆದರೆ ಪ್ರಗತಿಯ ಅನುಕೂಲಗಳನ್ನು ಸೂರೆಗೊಂಡ ಅಲ್ಪ ಸಂಖ್ಯೆಯ ಶ್ರೀಮಂತ ವರ್ಗಕ್ಕೆ ಬೇರೆಯೇ ಆದ ರೀತಿಯ ವಸ್ತುಗಳು ಬೇಕಾಗಿವೆ. ಭಾರತದಲ್ಲಿ ದೊರಕುವ ವಸ್ತುಗಳ ಬಗ್ಗೆ ಅವರಿಗೆ ಅತೃಪ್ತಿಯಿದೆ. ಕಡಿಮೆ ಸಂಖ್ಯೆಯಲ್ಲಿರುವ ಇವರ ಆಸೆ ಪೂರೈಸಲು ಭೋಗದ ವಿದೇಶಿ ವಸ್ತುಗಳ ಆಮದು ನೀತಿಯನ್ನು ಸರಳಗೊಳಿಸಬೇಕೆಂದು ಅಭಿಪ್ರಾಯ ಪಡಲಾಯಿತು. ಅಲ್ಲದೆ ಪ್ರಗತಿಯ ವೇಗ ಹೆಚ್ಚಿಸಲು ರಫ್ತಿನ ಮಾರುಕಟ್ಟೆಯ ಕಡೆಗೆ ಗಮನ ಹರಿಸಬೇಕೆಂದು ಯೋಜನಾ ತಜ್ಞರು ಆಲೋಚಿಸಲು ಪ್ರಾರಂಭಿಸಿದರು. ಆದ್ದರಿಂದ ಪ್ರಗತಿ ಸಾಧಿಸಲು ಆಂತರಿಕ ಮಾರುಕಟ್ಟೆಯ ಮೇಲೆ ಅವಲಂಬಿಸುವ ಬದಲು ರಫ್ತಿನ ಮಾರುಕಟ್ಟೆಯ ಮೇಲೆ ಅವಲಂಬಿಸುವ ಕ್ರಮ ಪ್ರಾರಂಭವಾಯಿತು. ವಿದೇಶಿ ಸಹಯೋಗ ಮತ್ತು ಸಹಭಾಗಿತ್ವಗಳನ್ನು ಪ್ರೋತ್ಸಾಹಿಸಲಾಯಿತು. ಈ ರೀತಿಯ ಹೊಸ ಆರ್ಥಿಕ ನೀತಿಯಿಂದ ನಮ್ಮ ದೇಶದಲ್ಲಿ ಬಹು ರಾಷ್ಟ್ರೀಯ ಕಂಪನಿಗಳ ಸಂಖ್ಯೆ ಹೆಚ್ಚಾಗತೊಡಗಿತು. ತತ್ಪರಿಣಾಮವಾಗಿ ಯಂತ್ರ ಹಾಗೂ ಅವುಗಳ ಬಿಡಿ ಭಾಗಗಳ ಆಮದಿನ ಪ್ರಮಾಣವೂ ಹೆಚ್ಚಿತು.

ಆಮದಾಗುವ ಮತ್ತೊಂದು ಪ್ರಮುಖ ವಸ್ತುಗಳೆಂದರೆ ಪೆಟ್ರೋಲಿಯಂಮ್ ವಸ್ತುಗಳು. ನಮ್ಮಲ್ಲಿ ದೊರಕುವ ಪೆಟ್ರೋಲಿಯಮ್ ಸಂಪನ್ಮೂಲ, ನಮ್ಮ ಅಗತ್ಯವನ್ನು ಪೂರೈಸುವುದಿಲ್ಲ. ಆದ್ದರಿಂದ ನಾವು ಪ್ರತಿವರ್ಷ ಸಾಕಷ್ಟು ಪ್ರಮಾಣದ ಪೆಟ್ರೋಲ್ ಮತ್ತು ಪೆಟ್ರೋಲಿಯಮ್ ವಸ್ತುಗಳನ್ನು ಆಮದು ಮಾಡಿಕೊಳ್ಳಬೇಕಾದ ಅನಿವಾರ್ಯತೆ ಎಲ್ಲರಿಗೂ

ಅರ್ಥವಾಗುತ್ತದೆ. ಈ ಕಾರಣಗಳಿಂದಲೇ ಪೆಟ್ರೋಲಿಯಂ ಸಂಪನ್ಮೂಲಗಳನ್ನು ಉಳಿಸುವುದು ಮತ್ತು ಪೆಟ್ರೋಲಿಯಮ್ ಬಳಕೆಯಲ್ಲಿ ದಕ್ಷತೆ ಹೆಚ್ಚಿಸುವುದು ಪ್ರಮುಖವಾದುದು. ಆದರೆ ಇದುವರೆವಿಗೆ ನಾವು ಆ ಕಡೆ ಹೆಚ್ಚಿನ ಗಮನ ಹರಿಸಿಲ್ಲ. ಉದಾಹರಣೆಗೆ ನಮಲ್ಲಿ ವಸ್ತುಗಳ ಮತ್ತು ಜನರ ಸಾರಿಗೆಯು ಹೆಚ್ಚೆಚ್ಚು ರಸ್ತೆಗಳನ್ನು ಅವಲಂಬಿಸುತ್ತಿದೆ. ರೈಲು ಮತ್ತು ಜಲ ಸಂಚಾರಕ್ಕೆ ಹೆಚ್ಚಿನ ಗಮನ ನೀಡಿಲ್ಲ. ಇಂಥಹ ಕಾರಣಗಳಿಂದಲೇ ನಾವು ಬಳಸುವ ಪೆಟ್ರೋಲಿಯಮ್‌ನ ಪ್ರಮಾಣ ಪ್ರತಿವರ್ಷ ಸೇಕಡಾ 9 ರಷ್ಟು ಹೆಚ್ಚುತ್ತಿದೆ.

ಸರ್ಕಾರದ ಲೆಕ್ಕ ಪತ್ರಗಳಲ್ಲಿ ಸಿಗದ ಆಮದಿನ ಮತ್ತೊಂದು ವಿಷಯವಿದೆ. ಅದೇ ಶಸ್ತ್ರಾಸ್ತ್ರಗಳು. ರಕ್ಷಣಾ ಇಲಾಖೆಗೆ ವಸ್ತುಗಳನ್ನು ಕೊಂಡು ಆಮದು ಮಾಡಿಕೊಂಡಾಗ ರಾಷ್ಟ್ರಪ್ರೇಮದ ಸಂಕೇತವೆಂದು ಆ ವ್ಯವಹಾರವನ್ನು ಸಾರ್ವಜನಿಕ ತನಿಖೆಗೆ ಒಳಪಡಿಸುತ್ತಿರಲಿಲ್ಲ. ಆದರೆ ಬೋಫೋರ್ಸ್ ಫಿರಂಗಿಯ ಪ್ರಕರಣದಿಂದ ಅಲ್ಲಿ ನಡೆಯುವ ಕಮಿಷನ್ ಮತ್ತು ಭ್ರಷ್ಟಾಚಾರದ ವ್ಯಾಪ್ತಿ ನಮ್ಮ ಕಣ್ಣನ್ನು ತೆರೆಸಿತು. ಇತ್ತೀಚೆಗೆ ಪ್ರಕಟವಾದ ಅಂಕಿ ಅಂಶಗಳ ಪ್ರಕಾರ 1985 ಮತ್ತು 1989 ರ ನಡುವೆ ಭಾರತವು ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ 1739 ಕೋಟಿ ರೂಗಳ ಮೌಲ್ಯದ ಶಸ್ತ್ರಾಸ್ತ್ರಗಳನ್ನು ಖರೀದಿಸಿದೆ. ಇದು ಸತ್ಯವೇ ಆದಲ್ಲಿ ಭಾರತದ ಆಮದಿನ ಪ್ರಮಾಣದಲ್ಲಿ ಶಸ್ತ್ರಾಸ್ತ್ರಗಳ ಆಮದಿನ ಪ್ರಮಾಣವೇ ಸಿಂಹಪಾಲು ಪಡೆಯುತ್ತದೆ. ಭಾರತವು ವಿದೇಶಗಳಿಂದ ಪಡೆಯುತ್ತಿರುವ ಪೆಟ್ರೋಲಿಯಮ್ ಮತ್ತು ಪೆಟ್ರೋಲಿಯಮ್ ಸಂಬಂಧಿತ ವಸ್ತುಗಳ ಆಮದಿಗಿಂತ ಈ ಪ್ರಮಾಣ ಹೆಚ್ಚಿನದು. ಶಸ್ತ್ರಾಸ್ತ್ರಗಳ ಆಮದಿನಲ್ಲಿ ಭಾರತವು ಪ್ರಪಂಚದಲ್ಲಿಯೇ ಅತಿ ದೊಡ್ಡ ರಾಷ್ಟ್ರವಾಗಬಹುದು. ಬಡತನದಿಂದ ಬಳಲುವ ನಮ್ಮ ದೇಶವು ಈ ಖ್ಯಾತಿ ಪಡೆಯುವುದು ಸರಿಯೇ ?

ಈ ಕಥೆಯ ಇನ್ನೊಂದು ಭಾಗ – ಭಾರತದ ವಿದೇಶಿ ವ್ಯಾಪಾರದ ಖೋತಾ ಸ್ವಾತಂತ್ರ ಬಂದ ಮೊದಲ ಮೂರು ದಶಕಗಳಲ್ಲಿ ತುಲನಾತ್ಮಕವಾಗಿ ಹೆಚ್ಚಿಲ್ಲದೇ ಇದ್ದುದು; ಅನಂತರ ತೀವ್ರವಾಗಿ ಏರಿತು. 1980 – 81ರಲ್ಲಿ ನಾವು ರಫ್ತಿಗಿಂತ ಹೆಚ್ಚು ಆಮದು ಕೊಂಡ ಪ್ರಮಾಣ ಸುಮಾರು 500 ಕೋಟಿ ರೂಪಾಯಿಗಳಾಗಿತ್ತು. ಎಂಬತ್ತರ ಕೊನೆಗೆ ಇದು ಸುಮಾರು 14000 ಕೋಟಿ ರೂಪಾಯಿಗಳಷ್ಟಾಯಿತು. ವಿದೇಶಿ ವಿನಿಮಯದ ವ್ಯಾಪಾರದಲ್ಲಿ ನಾವು ಗಳಿಸುವುದಕ್ಕಿಂತ ಹೆಚ್ಚಿಗೆ ಹೇಗೆ ಖರ್ಚು ಮಾಡಿದೆವು? ಉತ್ತರ ಸರಳ – ನಾವು ವಿದೇಶಿಯರಿಂದ ಸಾಲ ಪಡೆದವು.

ನಮ್ಮ ವ್ಯಾಪಾರ, ವಹಿವಾಟು ನಡೆಸುವುದಕ್ಕೆ ವರ್ಷದಿಂದ ವರ್ಷಕ್ಕೆ ನಾವು ಹೆಚ್ಚೆಚ್ಚು ಮೊತ್ತದ ಸಾಲ ಪಡೆಯುತ್ತಾ ಹೋದೆವು. ಆದ್ದರಿಂದ ನಮ್ಮ ಒಟ್ಟು ಸಾಲದ ಮೊತ್ತ ತೀವ್ರವಾಗಿ ಏರಿತು. ಸ್ವಾತಂತ್ರ ಪಡೆದ ನಂತರದ ಮೂರು ದಶಕಗಳಲ್ಲಿ ನಮ್ಮ ವಿದೇಶಿ

ಸಾಲದ ಮೊತ್ತವು ಕೇವಲ 2000 ಕೋಟಿ ಡಾಲರುಗಳಷ್ಟಿತ್ತು. ಆದರೆ ಇದರ ಎರಡು ಪಟ್ಟಿಗಿಂತ ಹೆಚ್ಚು ಸಾಲವನ್ನು ಕಳೆದ ದಶಕದಲ್ಲಿ ಪಡೆದಿದ್ದೇವೆ. *1991ರ ಜೂನ್ ವೇಳೆಗೆ ನಮ್ಮ ದೇಶದ ಒಟ್ಟು ವಿದೇಶಿ ಸಾಲ 7200 ಕೋಟಿ ಡಾಲರುಗಳಷ್ಟು ಅಥವಾ ಸುಮಾರು 200,000 ಕೋಟಿ ರೂಪಾಯಿಗಳಷ್ಟಾಗಿದೆ.* ಆದ್ದರಿಂದ ಪ್ರಗತಿ ಶೀಲ ರಾಷ್ಟ್ರಗಳಲ್ಲಿ ಅತಿ ಹೆಚ್ಚು ಸಾಲ ಮಾಡಿರುವ ದೇಶಗಳಲ್ಲಿ ಬ್ರೆಜಿಲ್ ಮತ್ತು ಮೆಕ್ಸಿಕೊ ನಂತರ ಭಾರತಕ್ಕೆ ಮೂರನೇ ಸ್ಥಾನವಿದೆ. ಭಾರತದಲ್ಲಿರುವ ಪ್ರತಿ ಸಂಸಾರದ ಮೇಲೂ ವಿದೇಶಿ ಸಾಲದ ಮೊತ್ತ ಸುಮಾರು ಹತ್ತು ಸಾವಿರ ರೂಪಾಯಿಗಳಾಗಿವೆ.

ಸಾಲದ ಹೊರೆ ಹೆಚ್ಚಾದಂತೆ, ವಿದೇಶಿಯರಿಗೆ ನಮ್ಮ ದೇಶ ತೆರುವ ಬಡ್ಡಿ ತೆರುವ ಪ್ರಮಾಣವೂ ಹೆಚ್ಚಾಯಿತು. 1989 – 90ರಲ್ಲಿ ಬಡ್ಡಿ ರೂಪದಲ್ಲಿ ನೀಡಬೇಕಾದ ಮೊತ್ತವೇ 3500 ಕೋಟಿ ರೂಪಾಯಿಗಳಾಯಿತು. ಅಲ್ಲದೆ ಹಿಂದೆ ಸಾಲ ಮಾಡಿದ್ದ ಹಣದ ಮರು ಪಾವತಿಯ ಪ್ರಮಾಣ ಇದಕ್ಕಿಂತಾ ಹೆಚ್ಚಿತ್ತು. ಇಷ್ಟು ಅಪಾರ ಪ್ರಮಾಣದ ಹಣವನ್ನು ಕ್ರೋಢೀಕರಿಸುವುದಾದರೂ ಹೇಗೆ? ಹೊಸ ಸಾಲ ಮಾಡುವುದು ಬಿಟ್ಟು ಬೇರೆ ಮಾರ್ಗವೇ ಇಲ್ಲ. ದೇಶ ಎಂಥ ವಿಷಮ ಚಕ್ರದಲ್ಲಿ ಸಿಲುಕಿಕೊಂಡಿದೆ ಊಹಿಸಿ. *ಹಿಂದಿನ ಸಾಲಗಳ ಮರುಪಾವತಿ ಮಾಡಲು ಹೊಸ ಸಾಲ ಮಾಡಬೇಕು. ನಾವು ನಿಜವಾಗಿಯೂ ಸಾಲದ ಶೂಲಕ್ಕೆ ಸಿಕ್ಕಿಕೊಳ್ಳುತ್ತಿದ್ದೇವೆ.*

1990 – 91ರಲ್ಲಿ ನಾವು ವಿದೇಶಿ ಸಾಲದ ಕಂತು ಮತ್ತು ಬಡ್ಡಿ ನೀಡಲು ಸುಮಾರು 20 – 25 ಸಾವಿರ ಕೋಟಿ ರೂಪಾಯಿಗಳ ಹೊಸ ಸಾಲ ಮಾಡಬೇಕಾಯಿತೆಂದು ಅಂದಾಜು ಮಾಡಲಾಗಿತ್ತು. ಪ್ರತಿ ಸಾರಿಯೂ ಸಾಲ ಮಾಡುತ್ತಿದ್ದಂತೆ ಸರ್ಕಾರವು ಮತ್ತೆ ಸಾಲ ಮಾಡಲು ತೀರ್ಮಾನಿಸಿತು. ಆದರೆ ಊಹಿಸಲಾಗದ ಘಟನೆಯೊಂದು ನಡೆಯಿತು. ಅಂತರಾಷ್ಟ್ರೀಯ ಬ್ಯಾಂಕಿಂಗ್ ವಲಯಗಳಲ್ಲಿ, ಭಾರತವು ಸಾಲ ಮರುಪಾವತಿ ಮಾಡುವ ಬಗ್ಗೆ ಅನುಮಾನದ ಗುಲ್ಲು ಹರಡಿತು. ವಿಶ್ವ ಬ್ಯಾಂಕ್ ಮತ್ತು ಅಂತರಾಷ್ಟ್ರೀಯ ಹಣಕಾಸು ನಿಧಿ (IMF)ಯಿಂದ ಎಚ್ಚರಿಕೆಯ ನೋಟೀಸ್ ಬಂದವು. ಆ ವರ್ಷ ಚುನಾವಣೆಯ ವರ್ಷವಾದ್ದರಿಂದ ಈ ನೋಟೀಸ್‌ಗಳಲ್ಲಿ ಸೂಚಿಸಲಾಗಿದ್ದ ನಿಯಮಗಳನ್ನು ಜಾರಿ ಮಾಡಲು ಸಾಧ್ಯವಿರಲಿಲ್ಲ. ಆದ್ದರಿಂದ ವಿಶ್ವ ಬ್ಯಾಂಕ್ ಮತ್ತು ಹಣಕಾಸು ನಿಧಿ ಕೋಪಗೊಂಡವು. ತತ್ಪರಿಣಾಮ ಬರುತ್ತಿದ್ದ ಹಣದ ಬಾಬ್ತುಗಳು ನಿಂತು ಹೋದವು. ಭಾರತಕ್ಕೆ ಸಾಲ ಕೊಡಲು ಯಾರಿಗೂ ಮನಸ್ಸಾಗಲಿಲ್ಲ. ಪ್ರತಿಯೊಬ್ಬರಿಗೂ ಅವರು ಕೊಟ್ಟಿರುವ ಸಾಲಕ್ಕೆ ಮೋಸವಾಗದಿರಲು ಗ್ಯಾರಂಟಿ ಮಾಡಿಕೊಳ್ಳುವ ಬಗ್ಗೆ ಕಾತುರವಿತ್ತು. ಸಾಲದ ಬಲೆ ಭಾರತವನ್ನು ಸುತ್ತುವರಿದಿತ್ತು. ಭಾರತದ ಸ್ಥಿತಿ ಅದೋಗತಿಯತ್ತ ಸಾಗುತ್ತಿತ್ತು.

## ವಿಕೃತವಾದ ಸುಧಾರಣೆಗಳು

ದೇಶವು ಕೂಪದಲ್ಲಿತ್ತು ಮತ್ತು ನಾಯಕರು ಕಂಗಾಲಾಗಿದ್ದರು. ಮಾದಕ ಔಷದಗಳ ಗುಂಗಿಗೆ ಬಿದ್ದ ವ್ಯಸನಿಯೊಬ್ಬ ಹೊರ ಬರಲು ಸಾಧ್ಯವಾಗದೆ ಒದ್ದಾಡುವಂತೆ. ವಿದೇಶಿ ಸಾಲಗಳ ವ್ಯಸನಕ್ಕೆ ರೂಢಿಯಾಗಿದ್ದ ದೇಶ. ಸಾಲದ ಮಾರ್ಗದಿಂದ ಹೊರ ಬರಲು ಸಾಧ್ಯವಾಗಲಿಲ್ಲ. ಸ್ವದೇಶಿ ಹಾಗೂ ಸ್ವಾಯತ್ತತೆಯ ಧ್ಯೇಯವಿಟ್ಟುಕೊಂಡಿದ್ದ ಭಾರತ ಯಾವ ಹೀನಾಯ ಸ್ಥಿತಿಗೆ ಜಾರಿತು ನೋಡಿ!

ವಿಶ್ವ ಬ್ಯಾಂಕ್ ಮತ್ತು IMFನಿಂದ ಬಂದ ಸಲಹೆಗಳಿಗೆ ಅನುಗುಣವಾಗಿ ವಿದೇಶಿ ಸಾಲಗಳಿಗೆ ಕೈಚಾಚುವ- ಮತ್ತು ಆಮದು ನೀತಿಯನ್ನು ಸರಳಗೊಳಿಸುವ ಮಾರ್ಗವನ್ನು ನಾವು ಕೈಗೊಂಡೆವು. ಅಮೆರಿಕಾ ನಿಯಂತ್ರಣದಲ್ಲಿರುವ ಈ ಎರಡು ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಗಳು ಇಂದು ಜಾಗತಿಕ ಆರ್ಥಿಕ ವ್ಯವಸ್ಥೆಯ ಯಜಮಾನಿಕೆ ವಹಿಸಿಕೊಂಡಿವೆ. 1981ರಲ್ಲಿ IMF ಜೊತೆ ಭಾರತ ಮಾಡಿಕೊಂಡ ಒಪ್ಪಂದಕ್ಕೆ ಅನುಗುಣವಾಗಿ ನಮ್ಮ ದೇಶವು ಅಂತರಾಷ್ಟ್ರೀಯ ಆರ್ಥಿಕ ವ್ಯವಸ್ಥೆಗೆ ಬಾಗಿಲು ತೆರೆಯಿತು. ಭಾರತದಲ್ಲಿ ಪ್ರಾರಂಭಿಸಲಾದ ಹೊಸ ಆರ್ಥಿಕ ನೀತಿಗಳಿಗೆ IMF ತನ್ನ ಒಪ್ಪಿಗೆ ನೀಡಿತು. ನಮ್ಮ ವಿದೇಶಿ ಸಾಲಗಳ ಅಗತ್ಯವನ್ನು ಪೂರೈಸುವುದಾಗಿ ಅವರು ಒಪ್ಪಿಕೊಂಡರು. ಸಮೃದ್ಧ ಆರ್ಥಿಕ ಪ್ರಗತಿ ಮತ್ತು ಕಲ್ಯಾಣದ ಮರೀಚಿಕೆ ನಮ್ಮ ಕಣ್ಣ ಮುಂದೆ ಬಂದು ನಿಂತವು. ಅಂತರಾಷ್ಟ್ರೀಯ ವಲಯಗಳಲ್ಲಿ ಭಾರತದ ಆರ್ಥಿಕ ಸುಧಾರಣೆಗಳನ್ನು ಪ್ರಸಂಶಿಸಲಾಯಿತು. ಆದರೆ ಎಂಬತ್ತರ ದಶಕದಲ್ಲಿ ನಾವು ಕೈಗೊಂಡ ಪ್ರಯೋಗವು, ನಮ್ಮ ಭವಿಷ್ಯವನ್ನು ಮತ್ತೊಬ್ಬರಲ್ಲಿ ಅಡವಿಟ್ಟಂತೆ ಆಗಿರುವುದಲ್ಲದೆ ಆರ್ಥಿಕ ಜೂಜಿನಲ್ಲಿ ನಾವು ಸೋಲನ್ನಪ್ಪಿದ್ದೇವೆ.

ಹೊಸಸಾಲವನ್ನು ಪಡೆಯಲು ಭಾರತ ಸರ್ಕಾರವು ಯಾವ ನೀಚ ಕೆಲಸ ಮಾಡಲು ಹಿಂದೇಟು ಹಾಕದಿರುವ ಮಟ್ಟ ತಲುಪಿತ್ತು.IMF ದೊಡ್ಡ ಯಜಮಾನನಾಗಿ ವರ್ತಿಸಿತು. ನಮ್ಮ ಆಶ್ವಾಸನೆಗಳಲ್ಲಿ ಮತ್ತು ಪ್ರಮಾಣಗಳಲ್ಲಿ ಅದಕ್ಕೆ ನಂಬಿಕೆ ಇರಲಿಲ್ಲ. ಅವರು ಸಾಲವನ್ನು ನೀಡುವ ಮೊದಲು ನಾವು ಕೆಲವು ನಿರ್ದಿಷ್ಟ ತೀರ್ಮಾನಗಳನ್ನು ಕೈಗೊಳ್ಳುವಂತೆ ಒತ್ತಾಯಿಸಿದರು.

ಆದ್ದರಿಂದ ಹಣ ನೀಡುವ ಸಂಸ್ಥೆಯ ಅಧಿಕಾರಿಗಳು ಮತ್ತು ಅವರ ಚೇಲಾಗಳಾದ ಭಾರತ ಸರ್ಕಾರದ ಅಧಿಕಾರಿಗಳು ಸಿದ್ಧಪಡಿಸಿದ ಆರ್ಥಿಕ ನೀತಿ ನಿಯಮಗಳನ್ನು ಆಗತಾನೆ ಸಚಿವರಾಗಿದ್ದವರಿಗೆ ಈ ನಿಯಮಗಳನ್ನು ಸರಿಯಾಗಿ ಓದಲೂ ಕಾಲಾವಕಾಶ ಸಿಗದೆ. ಆದೇಶಗಳಿಗೆ ಸಹಿ ಹಾಕುವ ಪರಿಸ್ಥಿತಿ ಉಂಟಾಯಿತು. ಇದು ನಿಜವಾಗಿಯೂ ವಾಮ ಮಾರ್ಗದಲ್ಲಿ ತಂದ ಬದಲಾವಣೆಯಾಗಿತ್ತು.

ಭಾರತದಲ್ಲಿ ತರಲಾದ ಆರ್ಥಿಕ ಸುಧಾರಣೆಗಳ ಸ್ಥೂಲ ಪರಿಚಯವನ್ನು ಈಗ ಮಾಡಿಕೊಳ್ಳೋಣ. ಸುಧಾರಣೆಗಳ ಹಿಂದಿನ ತರ್ಕವಾದರೂ ಏನು? ಸುಧಾರಣೆಗಳು ನಮ್ಮ ದೇಶವನ್ನು ಎಲ್ಲಿಗೆ ಒಯ್ಯುತ್ತವೆ ?

## ವ್ಯಾಪಾರದ (Trade) ಸುಧಾರಣೆಗಳು :

ವ್ಯಾಪಾರದ ಸುಧಾರಣೆಗಳು ಪ್ರಥಮ ಹಾಗೂ ಪ್ರಮುಖವಾದವು. ಆಮದು ಮತ್ತು ರಫ್ತಿಗೆ ಸಂಬಂಧಿಸಿದ ಎಲ್ಲ ನಿರ್ಬಂಧಗಳನ್ನು ತೆಗೆದು ಹಾಕುವುದು ಮತ್ತು ಏಳು ವರ್ಷಗಳೊಳಗೆ ಆಮದು ತೆರಿಗೆಯನ್ನು ಸೇಕಡಾ 30ರಷ್ಟು ಸಮಾನವಾಗಿರುವಂತೆ ಮಾಡುವುದು ವ್ಯಾಪಾರ ಸುಧಾರಣೆಗಳ ಮುಖ್ಯ ಧ್ಯೇಯ. ಈ ದಿಶೆಯಲ್ಲಿ ಹಲವಾರು ಕ್ರಮಗಳನ್ನು ಈಗಾಗಲೇ ಕೈಗೊಳ್ಳಲಾಗಿದೆ. ವ್ಯಾಪಾರವನ್ನು ಸರಳಗೊಳಿಸುವುದರಿಂದ ಆಗುವ ಪರಿಣಾಮಗಳನ್ನು ಊಹಿಸುವುದಕ್ಕೆ ಯಾವುದೇ ಪ್ರತಿಭೆಯ ಅಗತ್ಯವಿಲ್ಲ. ನಮ್ಮ ಆಮದಿನ ಪ್ರಮಾಣ ತೀವ್ರ ಹೆಚ್ಚುತ್ತದೆ. ಆದರೆ ಆಮದಿನ ಪ್ರಮಾಣಕ್ಕೆ ಸರಿಸಮವಾಗಿ ರಫ್ತು ಹೆಚ್ಚಾಗುವುದು ಕಷ್ಟ. ರಫ್ತು ಹೆಚ್ಚಿಸಲು ನಾವು ರಫ್ತು ಮಾಡಲು ತೀರ್ಮಾನಿಸುವುದಷ್ಟೇ ಸಾಲದು. ನಮ್ಮಿಂದ ವಸ್ತುಗಳನ್ನು ಬಯಸುವ ದೇಶಗಳಿರಬೇಕು. ಇಂದಿನ ದಿನಗಳಲ್ಲಿ ಪಶ್ಚಿಮ ದೇಶಗಳಿಗೆ ನಮ್ಮಿಂದ ವಸ್ತುಗಳನ್ನು ಕೊಂಡುಕೊಳ್ಳುವ ಮನಸ್ಸಿಲ್ಲ. ಆದ್ದರಿಂದ ವ್ಯಾಪಾರದಲ್ಲಿ ಖೋತಾ ಹೆಚ್ಚಾಗಿ ವಿದೇಶಿ ವಿನಿಮಯದ ಸಮಸ್ಯೆಗಳು ಮತ್ತಷ್ಟು ಉಲ್ಬಣಗೊಳ್ಳುತ್ತವೆ.

ನಾವು ಯೋಚಿಸಿರುವ ರೀತಿಯನ್ನು IMF ಸಹ ಒಪ್ಪುತ್ತದೆ. ಈ ಸಮಸ್ಯೆಯ ನಿವಾರಣೆಗೆ IMFನವರು ಸೂಚಿಸಿರುವ ಮಾರ್ಗ. ರೂಪಾಯಿಯ ಅಪಮೌಲ್ಯ. 1991ರ ಮೇ ತಿಂಗಳಲ್ಲಿ ಒಂದು ಡಾಲರ್‌ಗೆ 23 ರೂಗಳ ಬೆಲೆ ಇತ್ತು. ಈಗ ರೂಪಾಯಿಯ ಅಪಮೌಲ್ಯವಾದ ನಂತರ ಒಂದು ಡಾಲರ್‌ಗೆ 31 ರೂಗಳ ಮೌಲ್ಯವಿದೆ. ಡಾಲರ್‌ಗೆ ಹೋಲಿಸಿದಾಗ ರೂಪಾಯಿಯ ಮೌಲ್ಯ ಕಡಿಮೆಯಾಗಿದೆ. ಮತ್ತು ರೂಪಾಯಿಗೆ ಡಾಲರ್ ಹೋಲಿಸಿದಾಗ ಡಾಲರ್ ಮೌಲ್ಯ ಹೆಚ್ಚಾಗಿದೆ. ಬೆಲೆ ಹೆಚ್ಚಾದಾಗ, ಬೇಡಿಕೆ ಕಡಿಮೆಯಾಗಬೇಕು. ಡಾಲರ್‌ನ ಬೆಲೆ 23 ರೂಗಳಿಂದ 31ರೂ ಗಳಿಗೆ ಏರಿದೆ. ಆದ್ದರಿಂದ ಡಾಲರಿನ ಬೇಡಿಕೆ ಕಡಿಮೆಯಾಗಬೇಕು. ಭಾರತೀಯರಾದ ನಾವು ಕಡಿಮೆ ಆಮದು ಮಾಡಿಕೊಳ್ಳಬೇಕು. ಅಲ್ಲದೆ ಭಾರತದಿಂದ ರಫ್ತಿನ ಪ್ರಮಾಣ ಹೆಚ್ಚಬೇಕು. ಅಪಮೌಲ್ಯವಾಗುವುದಕ್ಕಿಂತ ಮೊದಲು ಒಬ್ಬ ವಿದೇಶಿ ವ್ಯಕ್ತಿ ಒಂದು ಡಾಲರ್‌ಗೆ 23 ರೂ. ಮೌಲ್ಯಗಳ ವಸ್ತುಗಳನ್ನು ಕೊಳ್ಳಬಹುದಿತ್ತು. ಆದರೆ ಇಂದು ಅದೇ ಒಂದು ಡಾಲರಿಗೆ 31 ರೂಗಳ ಮೌಲ್ಯವಿರುವ ವಸ್ತುಗಳನ್ನು ಕೊಳ್ಳಬಹುದು.

ಆದರೆ ವಾಸ್ತವ ಪ್ರಪಂಚದಲ್ಲಿ ನಾವು ನಿರೀಕ್ಷಿಸಿದ ಫಲ ದೊರಕುವುದಿಲ್ಲ. ಪೆಟ್ರೋಲಿಯಮ್, ಶಸ್ತ್ರಾಸ್ತ್ರಗಳು, ರಸ ಗೊಬ್ಬರಗಳು ಮುಂತಾದ ಗ್ರಾಹಕ ವಸ್ತುಗಳ ಆಮದನ್ನು ವಸ್ತುಗಳ ಬೆಲೆ ಏರಿದೆಯೆಂಬ ಏಕಮಾತ್ರ ಕಾರಣದಿಂದ ಕಡಿಮೆ ಮಾಡಲು ಸಾಧ್ಯವಿಲ್ಲ. ಈ ಉದ್ದೇಶವನ್ನು ಈಡೇರಿಸಲು ತಂತ್ರಜ್ಞಾನದಲ್ಲಿ ಹಲವಾರು ಬದಲಾವಣೆಗಳನ್ನು ಮಾಡಿಕೊಳ್ಳಬೇಕಾಗುತ್ತದೆ. ಬೆಲೆ ಹೆಚ್ಚಾಗುವುದರಿಂದ ಸ್ಥಾನಮಾನದ ಪ್ರಶ್ನೆಯ ಶ್ರೀಮಂತರ ಭೋಗ ವಸ್ತುಗಳ ಬೇಡಿಕೆ ಕಡಿಮೆಯಾಗುವ ಸಾಧ್ಯತೆಯೂ ಕಡಿಮೆ. ಆದ್ದರಿಂದ ಅಪಮೌಲ್ಯದಿಂದ ಆಮದಿನ ವೆಚ್ಚ ಹೆಚ್ಚಾಗುತ್ತಾ ಹೋಗುತ್ತದೆ. ಈಗಾಗಲೇ ಸೂಚಿಸಿರುವಂತೆ ನಮ್ಮ ನಿಯಂತ್ರಣದಲ್ಲಿ ಇಲ್ಲದ ಹಲವಾರು ಅಂಶಗಳು ರಫ್ತಿನ ಮೇಲೆ ಪ್ರಭಾವ ಬೀರುತ್ತವೆ. ಉದಾಹರಣೆಗೆ ನಾವು ರಫ್ತು ಮಾಡುವ ಕಾಫಿ ಮತ್ತು ಟೀ ಮುಂತಾದ ವಸ್ತುಗಳ ಪ್ರಮಾಣವನ್ನು ತಕ್ಷಣ ಹೆಚ್ಚಿಸಲು ಸಾಧ್ಯವಿಲ್ಲ. ಬೆಲೆಯಲ್ಲಿನ ಬದಲಾವಣೆಯಿಂದ ಕೆಲವು ವಸ್ತುಗಳ ಬೇಡಿಕೆ ಹೆಚ್ಚಾಗುವ ಸಾಧ್ಯತೆಯೂ ಅಷ್ಟಾಗಿ ಕಂಡು ಬರುತ್ತಿಲ್ಲ. ಶ್ರೀಮಂತ ದೇಶಗಳ ಜನರು ಬೆಲೆ ಕಡಿಮೆಯಿದೆ ಎಂಬ ಮಾತ್ರಕ್ಕೆ ಹೆಚ್ಚೆಚ್ಚು ಬಟ್ಟಲು ಕಾಫಿ/ಟೀ ಕುಡಿಯಲು ಪ್ರಾರಂಭಿಸುವುದಿಲ್ಲ. IMF ಸಂಸ್ಥೆಯು ಜಗತ್ತಿನಲ್ಲಿರುವ ಇತರೆ ಪ್ರಗತಿಶೀಲ ರಾಷ್ಟ್ರಗಳ ಮೇಲೂ ಒತ್ತಡ ತಂದು ಅವರು ರಫ್ತು ಮಾಡುವ ವಸ್ತುಗಳ ಬೆಲೆಯ ಅಪಮೌಲ್ಯ ಮಾಡಿಸುತ್ತಿರುವುದರಿಂದ. ನಾವು ವಸ್ತುಗಳ ಬೆಲೆ ಅಪಮೌಲ್ಯ ಮಾಡುವುದರಿಂದ ರಫ್ತಿನ ಪ್ರಮಾಣ ಹೆಚ್ಚಾಗುತ್ತದೆಂದು ನಿರೀಕ್ಷಿಸುವುದು ಹಗಲು ಕನಸೇ ಸರಿ. ಆದ್ದರಿಂದ ನಮ್ಮ ಜೊತೆಗೆ ಸ್ಪರ್ಧೆ ಮಾಡುತ್ತಿರುವವರ ಮಾರುಕಟ್ಟೆಯನ್ನು ಒಡೆಯುವುದರಿಂದ ನಾವು ರಫ್ತನ್ನು ಹೆಚ್ಚಿಸಲು ಅಸಾಧ್ಯ. *ಪ್ರಗತಿಶೀಲ ರಾಷ್ಟ್ರಗಳು ಈ ರಫ್ತಿನ ಸ್ಪರ್ಧೆಯಲ್ಲಿ ಸೋಲುತ್ತವೆ. ಆದರೆ ಶ್ರೀಮಂತ ರಾಷ್ಟ್ರಗಳು ಬಹಳ ಕಡಿಮೆ ಬೆಲೆಯಲ್ಲಿ ಅವರಿಗೆ ಬೇಕಾದ ವಸ್ತುಗಳನ್ನು ಪಡೆಯಲು ಸಾಧ್ಯವಾಗುತ್ತದೆ.*

ಈ ವಿಷಯದಲ್ಲಿ ಮತ್ತಷ್ಟು ವಿವರಿಸುವ ಅಗತ್ಯವಿಲ್ಲ. ನಮ್ಮ ಹಿಂದಿನ ಅನುಭವವನ್ನು ಸರಿಯಾಗಿ ನೆನಪಿಸಿಕೊಂಡರೆ ಸಾಕು.1981ರಲ್ಲಿ ಒಂದು ಡಾಲರಿನ ಬೆಲೆ ಕೇವಲ 12 ರೂ. ಆಗಿತ್ತು. ಯಾವುದೇ ನಿರ್ಧಾರಿತ ಹೇಳಿಕೆಗಳಿಲ್ಲದೆ 80ರ ದಶಕದಲ್ಲಿ ಸರ್ಕಾರವು ರೂಪಾಯಿಯ ಅಪಮೌಲ್ಯವನ್ನು ಮುಂದುವರೆಸುತ್ತಾ ಹೋಯಿತು. ಆದ್ದರಿಂದಲೇ ಇಂದು ಒಂದು ಡಾಲರಿನ ಬೆಲೆ31ರೂ.ಗಳಾಗಿವೆ. ರೂಪಾಯಿಯ ಅಪಮೌಲ್ಯ ಹೆಚ್ಚಾದರೂ ನಮ್ಮ ವ್ಯಾಪಾರದಲ್ಲಿನ ಖೋತಾ (Trade deficit) ಮುಂದುವರೆದಿದೆ. ರೂಪಾಯಿಯ ಅಪಮೌಲ್ಯ 12 ರಿಂದ 31. ಆದರೂ ಸಹ ನಾವು ಬಯಸಿದ್ದ ರಫ್ತಿನ ಹೆಚ್ಚಳ ಉಂಟಾಗದಿದ್ದಲ್ಲಿ ಮತ್ತೆ ಅಪಮೌಲ್ಯದಿಂದ ರಫ್ತು ಹೆಚ್ಚುತ್ತದೆಂದು ನಂಬಿ ಕೂರುವುದು ಮೂರ್ಖತನವೇ ಸರಿ.

ಅಪಮೌಲ್ಯದ ಪರಿಣಾಮವನ್ನು ಕಡಿಮೆ ಮಾಡುವ ಮತ್ತೊಂದು ಪ್ರಮುಖ ಅಂಶವೆಂದರೆ ಬೆಲೆ ಏರಿಕೆ. ಅಪಮೌಲ್ಯದ ಪರಿಣಾಮವಾಗಿ ಆಮದಿನ ವಸ್ತುಗಳ ಬೆಲೆ

ಹೆಚ್ಚಾಗಿ ಬೆಲೆ ಏರಿಕೆಗೆ ಕಾರಣವಾಗುತ್ತಿದೆ. ಕಳೆದ ಕೆಲವು ತಿಂಗಳುಗಳಿಂದ ಸತತವಾಗಿ ಬೆಲೆ ಏರಿಕೆಯಾಗುತ್ತಿರುವುದಕ್ಕೆ ಹೆಚ್ಚು ಕಡಿಮೆ ರೂಪಾಯಿಯ ಅಪಮೌಲ್ಯವೇ ಕಾರಣ. ಭಾರತದಲ್ಲಿ ವಸ್ತುಗಳ ಬೆಲೆ ಹೆಚ್ಚಾಗುವುದರಿಂದ. ಆ ವಸ್ತುಗಳು ರಫ್ತಾಗುವ ಸಾಧ್ಯತೆಯನ್ನು ಕಡಿಮೆ ಮಾಡುತ್ತವೆ.

## ಆರ್ಥಿಕ ಬೆಳವಣಿಗೆಯ ದಾರಿಗಳು

ರೂಪಾಯಿಯ ಅಪಮೌಲ್ಯದಿಂದ ನಿರೀಕ್ಷಿತ ಫಲ ದೊರೆಯಬೇಕಾದರೆ ನಾವು ಮತ್ತಷ್ಟು ಉಪಕ್ರಮಗಳನ್ನು ಕೈಗೊಳ್ಳಬೇಕೆಂದು ಹೇಳಲಾಗುತ್ತಿದೆ. ಈ ಕಾರಣದಿಂದಲೇ IMF ಸಂಸ್ಥೆಯು ಭಾರತದ ಮೇಲೆ ಆರ್ಥಿಕ ಸುಧಾರಣೆಗಳ ಪಟ್ಟಿಯನ್ನೇ ನೀಡಿ ಜಾರಿಗೊಳಿಸಲು ಒತ್ತಾಯ ಮಾಡುತ್ತಿದೆ. ಒಟ್ಟಾರೆ ಭಾರತದ ಆರ್ಥಿಕ ವ್ಯವಸ್ಥೆಯಲ್ಲಿ ಭಾರತೀಯನ ಕೊಳ್ಳುವ ಶಕ್ತಿಯನ್ನು ಕುಂದಿಸಲು ಹಲವಾರು ಕ್ರಮ ಕೈಗೊಳ್ಳಲು ಸಲಹೆ ಮಾಡಿದೆ. ಕೊಳ್ಳುವ ಶಕ್ತಿ ಕುಂದಿಸಿದರೆ. ವಸ್ತುಗಳ ಆಮದಿನ ಪ್ರಮಾಣವೂ ಕಡಿಮೆಯಾಗುತ್ತದೆಂದು IMF ತರ್ಕಿಸಿದೆ. ಆಗ ವ್ಯಾಪಾರದ ಸಮತೋಲನದಲ್ಲಿ ಪ್ರಗತಿಯುಂಟಾಗುತ್ತದೆ. ಅಲ್ಲದೆ ಬೆಲೆ ಏರಿಕೆಯನ್ನು ತಡೆಗಟ್ಟಿದಂತಾಗುತ್ತದೆ.

ಆರ್ಥಿಕ ಸುಧಾರಣೆಗಳ ಪಟ್ಟಿಯು ಮೂರು ಮುಖ್ಯ ಗುರಿಗಳನ್ನು ಇಟ್ಟುಕೊಂಡಿದೆ. ಮೊದಲನೆಯದು ನೌಕರರ ವರಮಾನ. *ವಸ್ತುಗಳ ಬೆಲೆ ಏರಿದಂತೆ ನೌಕರರ ವರಮಾನ ಏರಿಸಬಾರದು.* ಹಾಗಾದಾಗ ಮಾತ್ರ ಬೆಲೆ ಏರಿಕೆಯನ್ನು ನಿಲ್ಲಿಸಬಹುದು ಎಂದು ವಾದ ಮಾಡಲಾಗಿದೆ. ವೇತನ ಸ್ಥಗಿತ. ಕಡಿಮೆ ವೇತನ. DA (ವೇತನ ಭತ್ಯೆ) ಮುಟ್ಟುಗೋಲು. ಇತರೆ ಸೌಲಭ್ಯಗಳನ್ನು ನಿಲ್ಲಿಸುವುದು ಮುಂತಾದ ಕ್ರಮಗಳನ್ನು ಕೈಗೊಳ್ಳಲು ಪ್ರಾರಂಭಿಸಲಾಗಿದೆ. ನೌಕರರ ಮೇಲೆ ಮತ್ತೊಂದು ಆಕ್ರಮಣ ವೆಂದರೆ ಸಾರ್ವಜನಿಕ ವಿತರಣೆಯ ವಸ್ತುಗಳ ಮೇಲಿರುವ ಸಬ್ಸಿಡಿಯನ್ನು ತೆಗೆದು ಹಾಕುವುದು. ಲ್ಯಾಟಿನ್ ಅಮೆರಿಕಾದಲ್ಲಿನ ಅನೇಕ ರಾಷ್ಟ್ರಗಳ ಮೇಲೆ IMF ಹೇರಿರುವ ಆರ್ಥಿಕ ಸುಧಾರಣೆ ಕ್ರಮಗಳಿಂದ ಉಂಟಾಗಿರುವ ಪ್ರಮುಖ ಪ್ರಭಾವವೆಂದರೆ ನೌಕರಿ ನಡೆಸುವ ಜನರ ಜೀವನ ಮಟ್ಟ ಕುಸಿದಿರುವುದು. IMF/ವಿಶ್ವಬ್ಯಾಂಕ್‌ಗಳ ನಿರ್ದೇಶಕ ಸಲಹೆಗಳನ್ನು ಅನುಸರಿಸಿದ ಮೇಲೆ ಕಾರ್ಮಿಕರ/ನೌಕರರ ನಿಜವಾದ ವೇತನವು 1980ರಲ್ಲಿ ಇದ್ದುದಕ್ಕೆ ಹೋಲಿಸಿದರೆ ಸೇಕಡಾ 55 ರಿಂದ 20 ಕ್ಕೆ ಇಳಿದಿದೆ.

ಎರಡನೆಯ ಗುರಿ ಸರ್ಕಾರದ ಖೋತಾ ವೆಚ್ಚ. ಅಂದರೆ ಸರ್ಕಾರವು ಆದಾಯಕ್ಕಿಂತ ಹೆಚ್ಚು ಹಣವನ್ನು ವೆಚ್ಚ ಮಾಡುತ್ತಿರುವುದಕ್ಕೆ ತಡೆ ಒಡ್ಡುವುದು. ಆದಾಯಕ್ಕಿಂತಲೂ ಹೆಚ್ಚಿನ ಪ್ರಮಾಣವನ್ನು ಸರ್ಕಾರ ವೆಚ್ಚ ಮಾಡಬೇಕೆಂದು ಯಾವ ಪ್ರಜ್ಞಾವಂತ ನಾಗರೀಕನೂ ಸಲಹೆ ಮಾಡುವುದಿಲ್ಲ. ಆದರೆ ಇಲ್ಲಿರುವ ಮುಖ್ಯ ವಿಷಯವೆಂದರೆ ಯಾವ ಕ್ರಮಗಳನ್ನು ಕೈಗೊಳ್ಳುವುದರಿಂದ ಈ ವ್ಯತ್ಯಾಸವನ್ನು ಸರಿದೂಗಿಸುವುದು ಎಂಬ ವಿಷಯ. IMF

ಸಲಹೆಗಳ ಅನುಸರಣೆಯಿಂದ ಆದಾಯದ ಮೂಲಗಳು ಹೆಚ್ಚುವ ಬದಲು ಕಡಿಮೆಯಾಗಬಹುದು.

ವಿದೇಶಿ ವಸ್ತುಗಳಿಗೆ ಭಾರತದಲ್ಲಿ ಮಾರುಕಟ್ಟೆ ಒದಗಿಸುವ ದೃಷ್ಟಿಯಿಂದ ನಾವು ಕಸ್ಟಮ್ ತೆರಿಗೆಗಳನ್ನು ತೆಗೆಯಬೇಕಂತೆ. ಅದರಿಂದ ಈಗ ಕಸ್ಟಮ್ ತೆರಿಗೆ ಮೂಲದಿಂದ ಬರುತ್ತಿರುವ ಆದಾಯವೂ ನಿಂತುಹೋಗುತ್ತದೆ. ಕಂದಾಯ ತೆರಿಗೆಗಳಲ್ಲಿ ಆಗುವ ಕೊರತೆಯನ್ನು ನೀಗಿಸಲು ಅವರು ಮಾರಾಟ ತೆರಿಗೆ ಹೆಚ್ಚಿಸಲು ಸಲಹೆ ಮಾಡುತ್ತಾರೆ. ಇದರಿಂದ ಶ್ರೀಸಾಮಾನ್ಯನ ಮೇಲಾಗುವ ತೆರಿಗೆಯ ಹೊರೆ ಅವರಿಗೆ ಅರ್ಥವಾಗುವುದಿಲ್ಲ. ಆದರೆ ಶ್ರೀಮಂತರ ಮೇಲಿರುವ ತೆರಿಗೆಗಳನ್ನು ಇಳಿಸುವಲ್ಲಿ IMF/ವಿಶ್ವಬ್ಯಾಂಕ್ ಸಂಸ್ಥೆಗಳಿಗೆ ತೀವ್ರ ಆಸಕ್ತಿ. ಸಾರ್ವಜನಿಕ ಉದ್ಯಮಗಳ ದಕ್ಷತೆಯನ್ನು ಹೆಚ್ಚಿಸಲು ಪ್ರಯತ್ನಿಸುವ ಬದಲು IMF ಭಾರತ ಸರ್ಕಾರಕ್ಕೆ ಸಾರ್ವಜನಿಕ ಉದ್ಯಮಗಳ ಆಸ್ತಿಪಾಸ್ತಿಯನ್ನು ಮಾರಾಟಮಾಡಿ ಸರ್ಕಾರದ ವೆಚ್ಚವನ್ನು ಸರಿದೂಗಿಸಲು ಸಲಹೆ ಮಾಡುತ್ತಿದೆ. ಬಡವರಿಗೆ ನೀಡಲಾಗುತ್ತಿರುವ ಸಬ್ಸಿಡಿ ಕಡಿಮೆ ಮಾಡಲು ಮತ್ತು ಅಭಿವೃದ್ಧಿ ಯೋಜನೆಗಳಿಗೆ ವೆಚ್ಚ ಮಾಡಲು IMF ಆದ್ಯತೆ ನೀಡುತ್ತದೆ. ಇವೆಲ್ಲ ಕ್ರಮಗಳಿಂದ ಆರ್ಥಿಕ ವ್ಯವಸ್ಥೆಯಲ್ಲಿ ಭಾರತ ಸರ್ಕಾರದ ವೆಚ್ಚವನ್ನು ಕಡಿಮೆಗೊಳಿಸಬೇಕೆಂದು ಸಲಹೆ ಮಾಡುತ್ತಿದೆ.

ಅದಕ್ಷವಾದ ಉದ್ಯಮಗಳು – ಮೂರನೇ ಗುರಿಯ ವಸ್ತುಗಳು. ಅದಕ್ಷವಾದ ಘಟಕಗಳಿಗೆ ರಕ್ಷಣೆ ನಿಲ್ಲಿಸಬೇಕು. ಸಾಲ ಕಡಿಮೆ ನೀಡುವ ಮತ್ತು ಬಡ್ಡಿ ಏರಿಸುವ ಮೂಲಕ ಆರ್ಥಿಕ ವ್ಯವಸ್ಥೆಯ ಹಿಡಿತ ಸಾಧಿಸಲು ಸಾಧ್ಯವಾಗಬೇಕು. ಆರ್ಥಿಕ ವ್ಯವಸ್ಥೆಯ ಮೇಲಿನ ಬಿಗಿ ಹಿಡಿತದಿಂದ ಹೊಸ ಬಂಡವಾಳ ಹೂಡುವ ಉತ್ಸಾಹವನ್ನು ಕಡಿಮೆ ಮಾಡಲು ಮತ್ತು ಅದಕ್ಷ ಘಟಕಗಳನ್ನು ಇಲ್ಲದಂತೆ ಮಾಡಲು ಸಾಧ್ಯವಾಗುತ್ತದೆ. ಇದರಿಂದ ಕೆಲವೇ ಕೆಲವು ದಕ್ಷ ಘಟಕಗಳು ಮುಚ್ಚಲ್ಪಡಬಹುದು. ಸ್ವಲ್ಪ ಮಟ್ಟಿನ ತ್ಯಾಗ ಅನಿವಾರ್ಯ.

ಸರ್ಕಾರದ ವೆಚ್ಚ ಮತ್ತು ಜನ ಸಾಮಾನ್ಯನ ಬೇಡಿಕೆಯಲ್ಲಿನ ಕಡಿತ ಹಾಗೂ ಆರ್ಥಿಕ ವ್ಯವಸ್ಥೆಯ ಬಿಗಿ ನಿಲುವುಗಳಿಂದ ಆಮದು ಕಡಿಮೆಯಾಗಿ. ಬೆಲೆ ಏರಿಕೆ ನಿಂತು. ನಿಧಾನವಾಗಿ ಆರ್ಥಿಕ ದಕ್ಷತೆಯು ಉತ್ತಮವಾಗಿ. ದೇಶವು ಆರ್ಥಿಕ ಪ್ರಗತಿಯ ದಾರಿಯಲ್ಲಿ ಸಾಗಲು ಅನುಕೂಲವಾಗುತ್ತದೆಂದು ತರ್ಕಿಸಲಾಗಿದೆ. ಆಮದನ್ನು ಸರಳಗೊಳಿಸುವುದರಿಂದಲೂ ನೇರವಾಗಿ ಆರ್ಥಿಕ ಹಿಂಜರಿತಕ್ಕೆ ಪ್ರೇರಣೆ ದೊರಕುತ್ತದೆ. ಆರ್ಥಿಕ ಸುಧಾರಣೆಗಳಿಂದ ಭಾರತದ ಆರ್ಥಿಕ ವ್ಯವಸ್ಥೆಯು ಪೂರ್ಣವಾಗಿ ಅಂತರಾಷ್ಟ್ರೀಯ ಸ್ಪರ್ಧೆಗೆ ಒಳಗಾಗುತ್ತದೆ. IMF ನ ಪ್ರಕಾರ ಅಂತರಾಷ್ಟ್ರೀಯ ಸ್ಪರ್ಧೆಗೆ ನಿಲ್ಲುವಂತಹ ಉದ್ಯಮಗಳು ಮಾತ್ರ ಉಳಿಯಬೇಕು. ಇದರಿಂದಾಗುವ ಕೈಗಾರಿಕಾ ಅನಾಹುತ ಯಾರ ಊಹೆಗೂ ನಿಲುಕುವಂತಹದ್ದಲ್ಲ. ವಿಶ್ವ ಬ್ಯಾಂಕ್‌ನ ಅಧ್ಯಯನದಂತೆ ಆರ್ಥಿಕ ಸುಧಾರಣೆಗಳು ಜಾರಿಗೆ ಬಂದ ಏಳು ವರ್ಷಗಳ ನಂತರ ಪ್ರಮುಖವಾದ ಕೈಗಾರಿಗಾ ಸ್ಥಗಿತವುಂಟಾಗುತ್ತದೆಂದು ತಿಳಿದು ಬಂದಿದೆ. ಇಂಜನಿಯರಿಂಗ್ ಮತ್ತು

ರಸಾಯನಿಕಗಳಂತಹ ಕೈಗಾರಿಕಾ ವಿಭಾಗಗಳ ಉತ್ಪಾದನೆಯಲ್ಲಿ ತೀವ್ರ ಇಳಿತ ಉಂಟಾಗಬಹುದೆಂದು ನಿರೀಕ್ಷಿಸಲಾಗಿದೆ.

ಕೈಗಾರಿಕೆಗಳು ಸ್ಥಗಿತವಾಗುವುದರಿಂದ ಈಗಾಗಲೇ ನಮ್ಮಲ್ಲಿರುವ ತೀವ್ರ ನಿರುದ್ಯೋಗ ಸಮಸ್ಯೆಯು ಉಲ್ಬಣವಾಗುತ್ತದೆ. ಎಂಬತ್ತರ ದಶಕದಲ್ಲಿ ಕೈಗಾರಿಕಾ ಉತ್ಪಾದನೆಯಲ್ಲಿ ತೀವ್ರವಾದ ಹೆಚ್ಚಳ ಕಂಡುಬಂದಿದ್ದರೂ ಸಹ ಜನರಿಗೆ ಉದ್ಯೋಗ ಒದಗಿಸುವುದರಲ್ಲಿನ ಹೆಚ್ಚಳ ಮಂದಗಾಮಿಯಾಗಿತ್ತು. ಖಾಸಗಿ ಉತ್ಪಾದನಾ ಘಟಕಗಳಲ್ಲಿ ಉದ್ಯೋಗ ಅವಕಾಶವು 3 ಲಕ್ಷ ಜನರಿಗೆ ದಕ್ಕದೆ ಹೋಗಿದೆ ಎಂಬುದು ಒಂದು ಅಧ್ಯಯನದಿಂದ ಗೊತ್ತಾಗಿದೆ. ಎಂಬತ್ತರ ದಶಕದಲ್ಲಿಯೇ ಉದ್ಯೋಗ ಅವಕಾಶದ ಗತಿ ಹೀಗಾದರೆ ಕೈಗಾರಿಕಾ ಹೆಚ್ಚಳವೇ ನಿಂತು ಹೋಗುವ ತೊಂಬತ್ತರ ದಶಕದಲ್ಲಿ ಯಾವ ಸ್ಥಿತಿ ಬರಬಹುದು?

## ರಾಷ್ಟ್ರೀಯ ಸಂಪ್ರದಾಯಗಳಿಗೆ ವಿದಾಯ !

ಬರುವ ವರ್ಷಗಳಲ್ಲಿ ನಮ್ಮ ದೇಶದ ಜನರು ಎದುರಿಸಬೇಕಾದ ಸಮಸ್ಯೆಗಳು ಏನೆಂಬುದು ಈವರೆಗೆ ಮಾಡಿರುವ ಚರ್ಚೆಯಿಂದ ಸ್ಪಷ್ಟವಾಗುತ್ತದೆ. ಒಂದು ವೇಳೆ ಯಾರಿಗಾದರೂ ಕೆಲಸ ಸಿಕ್ಕರೆ ಅದೃಷ್ಟವೇ ಸರಿ. ಕೆಲಸ ಸಿಕ್ಕಾಗಲೂ ನಿಮ್ಮ ವರಮಾನವು ಒಂದು ಕಡೆ ಬೆಲೆ ಏರಿಕೆಯಿಂದ ಹಾಗೂ ಮತ್ತೊಂದು ಕಡೆ ಸಬ್ಸಿಡಿಗಳ ಕಡಿತದಿಂದ ಕಡಿಮೆಯಾಗುತ್ತಾ ಹೋಗುತ್ತದೆ. ಅಗತ್ಯ ವಸ್ತುಗಳ ಬೆಲೆ ತೀವ್ರವಾಗಿ ಏರುತ್ತದೆ. *ಈ ವರ್ಷ ಗ್ರಾಹಕರ ವಸ್ತುಗಳ ಬೆಲೆ ಕೊನೆಯ ಪಕ್ಷ ಸೇಕಡಾ 20 ರಷ್ಟು ಹೆಚ್ಚುವ ಸಂಭವವಿದೆ.* ಸುಧಾರಣೆಗಳ ವಿಚಿತ್ರ ಪರಿಣಾಮವೆಂದರೆ ಅದು ಹಣವಿರುವ ಶ್ರೀಮಂತರನ್ನು ಮುಟ್ಟದೆ. ಬಡವರ ಹೊಟ್ಟೆ ಬಟ್ಟೆಗೆ ಬಿಗಿ ಮಾಡುವ ಬೆಲ್ಟ್ ಹಾಕಲು ಹವಣಿಸುವುದು. ದೇಶದ ಕಾನೂನುಗಳನ್ನು ಮುರಿದರೂ ಸಹ ಶ್ರೀಮಂತರಿಗೆ ಶಿಕ್ಷೆಯನ್ನು ಕೊಡದಿರುವುದು ಅಥವಾ ತೆರಿಗೆಯನ್ನು ಹಾಕದಿರುವುದು ಸುಧಾರಣೆಗಳ ಮತ್ತೊಂದು ನೀತಿ. ಕಪ್ಪು ಹಣದ ಬಳಕೆಯನ್ನು ಕಾನೂನು ಬದ್ಧ ಮಾಡುವ ಪ್ರಯತ್ನ ಸಾಗಿದೆ. ಬಡತನದ ಸಮಸ್ಯೆಯನ್ನು ನಿವಾರಿಸಲು ಸಾಧ್ಯವಾಗದ ನಮ್ಮ ಆಡಳಿತಗಾರರು ಈಗ ಶ್ರೀಮಂತರಿಗೆ ಭಕ್ಷ ಭೋಜ್ಯಗಳ ಬಡಿಸಿ. ಅವರು ಬಿಡಬಹುದಾದ ಎಂಜಲು ಭಕ್ಷ್ಯಗಳು ಬಡವರಿಗೆ ತಲುಪೇ ತಲುಪುತ್ತವೆ ಎಂದು ತೀರ್ಮಾನ ಮಾಡಿದ್ದಾರೆ.

ಹೆಚ್ಚುವ ಬಡತನ ಮತ್ತು ಆರ್ಥಿಕ ಸ್ಥಗಿತದಿಂದ ಸಾಮಾಜಿಕ ಸಮಸ್ಯೆಗಳು ಉಲ್ಬಣಗೊಳ್ಳುತ್ತವೆ. ಪ್ರಾದೇಶಿಕ ಅಸಮಾನತೆಯನ್ನು ಕಡಿಮೆ ಮಾಡಲು ನಾವು ಹಿಂದೆ ಮಾಡಿದ ಪ್ರಯತ್ನ ಯಶಸ್ಸು ಕಾಣಲಿಲ್ಲ. ಇಂದು ನಾವು ಆ ಎಲ್ಲ ಪ್ರಯತ್ನಗಳನ್ನು ಪೂರ್ಣವಾಗಿ ಕೈ ಬಿಡುತ್ತಿದ್ದೇವೆ. ಮಾರುಕಟ್ಟೆ ನಿರ್ದೇಶಿಸಿದಂತೆ ಹಣ ಮತ್ತು ಜನ ಬಲಗಳ ವಿತರಣೆಯಾಗುತ್ತದೆ. ಆದ್ದರಿಂದ ಪ್ರಾದೇಶಿಕ ಅಸಮಾನತೆ ಮತ್ತಷ್ಟು ಹೆಚ್ಚುವ ಸಂಭವವಿದೆ.

ಈ ಸ್ಥಿತಿ ಎಲ್ಲಿಯವರೆಗೆ ಮುಂದುವರೆಯುತ್ತದೆ? ಈ ಕಾರ್ಗತ್ತಲೆಯ ಗವಿಯಲ್ಲಿ ಬೆಳಕಿನ ದಾರಿಯಲ್ಲಿದೆ? ಬಹುರಾಷ್ಟ್ರೀಯ ಕಂಪನಿಗಳು ಮತ್ತು ಅವುಗಳ ಸಹಯೋಗ ಹೊಂದಿರುವ ಕಂಪನಿಗಳ ಮೇಲೆ ಭಾರತ ಸರ್ಕಾರವು ಆಸೆಯನ್ನಿಟ್ಟು ಕೊಂಡಿದೆ. ಅವು ಹೊಸ ತಂತ್ರಜ್ಞಾನ, ಹಣದ ಹೊಸ ಸಂಪನ್ಮೂಲ ಮತ್ತು ಹೊಸ ಮಾರುಕಟ್ಟೆಗಳನ್ನು ತರಬಹುದೆಂದು ಆಶಿಸಲಾಗಿದೆ. ನಾವು ದಕ್ಷಿಣ ಕೊರಿಯ ಮತ್ತು ತೈವಾನ್‌ಗಳಂತೆ ಮುಂಮವರೆಯುತ್ತೇವೆ ಎಂದು ವಾದಿಸಲಾಗುತ್ತಿದೆ. ಆದರೆ ದಕ್ಷಿಣ ಕೊರಿಯಾದ ಪ್ರಯೋಗ ನಮ್ಮ ನಂಬಿಕೆಗೆ ವಿರುದ್ಧವಾಗಿದೆ. ಕೊರಿಯ ಪ್ರಭುತ್ವ ಮತ್ತು ನಾಗರೀಕರ ಸುಭದ್ರ ನಿರ್ದೇಶನ ಮತ್ತು ನಿಯಂತ್ರಣದಲ್ಲಿ ಕೊರಿಯಾದ ಕೈಗಾರೀಕರಣ ನಡೆಯಿತು. ಔಷಧ, ರಸಗೊಬ್ಬರ ಮುಂತಾದ ಆಮದು ಮಾಡಿಕೊಳ್ಳಬೇಕಾದ ವಸ್ತುಗಳ ಆಂತರಿಕ ಉತ್ಪಾದನೆಯನ್ನು ಬಹುರಾಷ್ಟ್ರೀಯ ಕಂಪನಿಗಳಿಗೆ ನೀಡಿಲ್ಲ. ರಫ್ತು ಮಾಡುವ ವಸ್ತುಗಳಲ್ಲಿಯೂ ಸಹ ಎಲೆಕ್ಟ್ರಾನಿಕ್ಸ್ ಉದ್ಯಮದಲ್ಲಿ ಮಾತ್ರ ಬಹುರಾಷ್ಟ್ರೀಯ ಕಂಪನಿಗಳು ಪ್ರಮುಖ ಪಾತ್ರ ವಹಿಸಲು ಅವಕಾಶ ನೀಡಲಾಗಿದೆ. ಕೊರಿಯ ದೇಶ ಕಬ್ಬಿಣ ಮತ್ತು ನೌಕೆಗಳ ರಫ್ತಿನಲ್ಲಿ ಅಸಾಧಾರಣ ಯಶಸ್ಸು ಸಾಧಿಸಿದ. ಆದರೆ ಇವೆಲ್ಲವನ್ನೂ ಯಾವುದೇ ವಿದೇಶಿ ಬಂಡವಾಳವಿಲ್ಲದೆ ಸಾಧಿಸಲಾಗಿದೆ. 1984ರಲ್ಲಿ ಕೊರಿಯಾದಿಂದ ರಫ್ತಾದ ವಸ್ತುಗಳ ಸೇಕಡಾ 60ರಷ್ಟು ವಸ್ತುಗಳು ರಾಷ್ಟ್ರೀಯ ನಿಯಂತ್ರಣದಲ್ಲಿ ನಿರ್ಮಿಸಿರುವ ಬೃಹತ್ ಹಾಗೂ ರಾಸಾಯನಿಕ ಉದ್ಯಮಗಳಿಂದ ಆಗಿದೆ. ಒಂದು ವೇಳೆ ಕೊರಿಯದಿಂದ ನಾವು ಕಲಿಯಬೇಕಾದ ಪಾಠವೆಂದರೆ, ಸರ್ಕಾರವು ದೃಢ ನಿಲುವಿನಿಂದ ಮಧ್ಯೆ ಪ್ರವೇಶಿಸಬೇಕು ಮತ್ತು ಬಹುರಾಷ್ಟ್ರೀಯ ಕಂಪನಿಗಳಿಗೆ ಸ್ವಾತಂತ್ರ್ಯ ನೀಡಬಾರದು. ಇಷ್ಟಾದರೂ ಸಹ ಭಾರತ ಸರ್ಕಾರವು ಕೈಗೊಳ್ಳುತ್ತಿರುವ ಮೊದಲ ಕಾರ್ಯವೆಂದರೆ ಬಹುರಾಷ್ಟ್ರೀಯ ಕಂಪನಿಗಳನ್ನು ಆಕರ್ಷಿಸಲು ಬೇಕಾದ ವಾತಾವರಣವನ್ನು ನಿರ್ಮಿಸುವುದು. ವಿದೇಶಿ ಬಂಡವಾಳ ಹೂಡುವುದಕ್ಕೆ ಇರುವ ಎಲ್ಲ ನಿರ್ಬಂಧಗಳನ್ನು ತೆಗೆದು ಹಾಕುವ ತೀರ್ಮಾನವನ್ನು ಭಾರತ ಸರ್ಕಾರ ಕೈಗೊಂಡಿದೆ.

ಸಾಮ್ರಾಜ್ಯಶಾಹಿ ಶಕ್ತಿಗಳಿಗೆ ಅವರ ವಸ್ತುಗಳನ್ನು ಮಾರಾಟಮಾಡಲು ನಮ್ಮಂಥಹ ದೇಶಗಳು ಮಾರುಕಟ್ಟೆಯನ್ನು ತೆರೆಯುವ ಸಂದರ್ಭಕ್ಕಾಗಿ ಕಾಯುತ್ತಿದ್ದವು. ಇಂದು ಅವು ವಸ್ತುಗಳ ಮುಕ್ತ ಮಾರಾಟದಿಂದ ತೃಪ್ತವಾಗಿಲ್ಲ. ನಮ್ಮ ದೇಶದಲ್ಲಿ ಕೈಗಾರಿಕೆ ಸ್ಥಾಪಿಸಲು ಮತ್ತು ಸೇವಾ ಕ್ಷೇತ್ರಗಳಾದ ಬ್ಯಾಂಕಿಂಗ್, ಜೀವ ವಿಮೆ ಮುಂತಾದ ಕ್ಷೇತ್ರಗಳಲ್ಲಿ ಕಾರ್ಯ ಪ್ರಾರಂಭಿಸಲು ಅವಕ್ಕೆ ಮುಕ್ತ ಸ್ವಾಗತ ಬೇಕಾಗಿದೆ. ಮೂರನೇ ಜಗತ್ತಿನ ರಾಷ್ಟ್ರಗಳು ತಮ್ಮ ಆರ್ಥಿಕ ವ್ಯವಸ್ಥೆಗಳನ್ನು ಬಹುರಾಷ್ಟ್ರೀಯ ಕಂಪನಿಗಳಿಗೆ ಪೂರ್ಣವಾಗಿ ತೆರೆಯುವಂತೆ ಅಂತರಾಷ್ಟ್ರೀಯ ಒಪ್ಪಂದಗಳಿಗೆ ಸಹಿ ಹಾಕುವಂತೆ ಒತ್ತಾಯಿಸುತ್ತಿವೆ. ವ್ಯಾಪಾರ ವಹಿವಾಟುಗಳ ಅಂತರಾಷ್ಟ್ರೀಯ ವೇದಿಕೆಯಾದ GATT (General Agreement of Tariffs and Trade)ನಲ್ಲಿ ನಡೆಯುತ್ತಿರುವ ಚರ್ಚೆಗಳನ್ನು ನೋಡಿದರೆ ಅವರು ಈ ಕುತಂತ್ರದಲ್ಲಿ ಯಶಸ್ವಾಗುವಂತೆ ಕಾಣುತ್ತದೆ.

ಇವುಗಳಷ್ಟರಿಂದಲೇ ತೃಪ್ತರಾಗದ ಪಶ್ಚಿಮ ದೇಶಗಳು. ತಂತ್ರಜ್ಞಾನ ಮತ್ತು ಜ್ಞಾನದ ವರ್ಗಾವಣೆಯ ಮೇಲೆ ಪೂರ್ಣ ನಿಯಂತ್ರಣ ಸಾಧಿಸಲು ಯೋಜನೆಗಳನ್ನೂ ಹಮ್ಮಿಕೊಳ್ಳುತ್ತವೆ. ವ್ಯಾಪಾರಕ್ಕೆ ಸಂಬಂಧಿಸಿದ ಸೇವೆಗಳ ನಂತರ ಶ್ರೀಮಂತ ದೇಶಗಳು ಬಡ ದೇಶಗಳನ್ನು ಹೆದರಿಸಲು ಭೌದ್ಧಿಕ ಆಸ್ತಿಯ ಹಕ್ಕುಗಳ ಪ್ರಸ್ತಾಪವನ್ನು ಮತ್ತೊಂದು ಪ್ರಮುಖ ಅಸ್ತ್ರವನ್ನಾಗಿ ಮಾಡಿಕೊಂಡಿವೆ. ಸ್ವಾಮ್ಯಕ್ಕೆ ಸಂಬಂಧಿಸಿದ ಕಾಯದೆಯನ್ನು ಬದಲಾಯಿಸಲು ಭಾರತದಂತಹ ದೇಶಗಳನ್ನು ಅವು ಒತ್ತಾಯಿಸುತ್ತಿವೆ. ಸ್ವಾಮ್ಯ ಕಾಯದೆಯು ಹೊಸದಾಗಿ ಕಂಡು ಹಿಡಿಯಲಾದ ಸಂಶೋಧನೆಗಳ ಮೇಲೆ ಸಂಶೋಧಕರಿಗೆ ಅಥವಾ ಅವರನ್ನು ಸಂಯೋಜಿಸಿರುವ ಕಂಪನಿಗಳಿಗೆ ಸಂಪೂರ್ಣ ಹಕ್ಕನ್ನು ನೀಡುತ್ತದೆ. ಸ್ವಾಮ್ಯದ ಹಕ್ಕು ಪಡೆದಿರುವವರಿಂದ ಅನುಮತಿ ಪಡೆಯದೆ ಯಾವುದೇ ವ್ಯಕ್ತಿಯು ಸ್ವಾಮ್ಯದ ಸಂಶೋಧನೆಯನ್ನು ಬಳಸುವಂತಿಲ್ಲ. ವಿಜ್ಞಾನ ಸಂಶೋಧನೆಯ ಅನುಕೂಲಗಳು ಜನರಿಗೆ ಅದರಲ್ಲಿಯೂ ವಿಶೇಷವಾಗಿ ಮೂರನೇ ಜಗತ್ತಿನ ರಾಷ್ಟ್ರಗಳ ಜನರಿಗೆ ದೊರಕದಂತೆ ಬಹುರಾಷ್ಟ್ರೀಯ ಕಂಪನಿಗಳು ಈ ಸ್ವಾಮ್ಯದ ಹಕ್ಕನ್ನು ಬಳಸಿಕೊಳ್ಳಬಹುದು. ಆದ್ದರಿಂದ ಭಾರತೀಯ ಸ್ವಾಮ್ಯ ಕಾಯದೆಯಲ್ಲಿ ಗ್ರಾಹಕರ ಹಿತವನ್ನು ಕಾಯುವ ಅನೇಕ ಕಾನೂನುಗಳಿವೆ. ಪ್ರಗತಿ ಶೀಲರಾಷ್ಟ್ರದ ಹಿತ ರಕ್ಷಿಸುವಲ್ಲಿ ಎರಡು ದಶಕಗಳ ಚರ್ಚೆಯ ನಂತರ ಜಾರಿಗೆ ಬಂದಿರುವ ಭಾರತೀಯ ಸ್ವಾಮ್ಯ ಕಾಯದೆಯು (Indian Patent Act) ಅತ್ಯಂತ ಮಾದರಿಯ ಕಾಯದೆಯೆಂದು ಪರಿಗಣಿಸಲ್ಪಟ್ಟಿದೆ. ಆದ್ದರಿಂದಲೇ ಅಮೆರಿಕಾದ ನೀತಿ ನಿರ್ಮಿಸುವ ತಜ್ಞರು ಭಾರತದ ಸ್ವಾಮ್ಯ ಕಾಯದೆಯನ್ನು ತೀವ್ರವಾಗಿ ವಿರೋಧಿಸುತ್ತಿದ್ದಾರೆ.

ನಾವು ಅವರ ಒತ್ತಾಯಕ್ಕೆ ಮಣಿಯದಿದ್ದರೆ, ನಮ್ಮ ಮೇಲೆ ವ್ಯಾಪಾರ ನಿರ್ಬಂಧ ಹೇರುವ ಬೆದರಿಕೆ ಹಾಕುತ್ತಿದ್ದಾರೆ. ನಮ್ಮ ಕಾನೂನು, ಕಾಯದೆಗಳನ್ನು ತಿದ್ದಲು ವಿದೇಶಿಯರು ಬಯಸಿದ್ದಾರೆ. ಅಮೆರಿಕಾದ ಕಂಪನಿಗಳಿಗೆ ಸ್ವಾಮ್ಯವಿರುವ ವಸ್ತುಗಳನ್ನು, ಒಂದು ವೇಳೆ ಹೊಸ ವಿಧಾನದಿಂದ ಸಿದ್ಧಪಡಿಸಲು ಸಾಧ್ಯವಾದರೂ ಸಹ ಭಾರತದಲ್ಲಿ ಉತ್ಪಾದಿಸಲು ಯಾರಿಗೂ ಅವಕಾಶಕೊಡದಂತಹ ಕಾಯದೆಗಳನ್ನು ನಮ್ಮ ಸರ್ಕಾರ ಜಾರಿಗೊಳಿಸಬೇಕೆಂದು ಅವರು ಬಯಸುತ್ತಾರೆ. ನಾವು ಒಪ್ಪುವುದಕ್ಕಿಂತ ದೀರ್ಘಕಾಲದವರೆಗೆ ವಸ್ತುಗಳ ಉತ್ಪಾದನೆಯ ಮೇಲಿನ ಹಕ್ಕು ಅವರಿಗಿರಬೇಕೆಂದು ಬಯಸುತ್ತಾರೆ. ಭಾರತೀಯ ಸ್ವಾಮ್ಯಕಾಯದೆಯ ಪ್ರಕಾರ ಸ್ವಾಮ್ಯ ಹಕ್ಕು ಇರುವ ವ್ಯಕ್ತಿಯು ಭಾರತದಲ್ಲಿ ಆ ವಸ್ತುವನ್ನು ತಯಾರಿಸದಿದ್ದಲ್ಲಿ, ನಿರ್ದಿಷ್ಟಗೊಳಿಸಿರುವ ಸಮಯದ ನಂತರ ಭಾರತ ಸರ್ಕಾರವು ಆಸಕ್ತಿ ಇರುವವರಿಗೆ ಆ ವಸ್ತುವನ್ನು ಉತ್ಪಾದಿಸಲು ಅನುಮತಿ ನೀಡಬಹುದು. ಭಾರತೀಯ ಸ್ವಾಮ್ಯ ಕಾಯದೆಯ ಈ ಕಾನೂನನ್ನು ಬದಲಾಯಿಸಬೇಕೆಂದು ಅಮೆರಿಕಾ ಬಯಸುತ್ತದೆ. ಒಂದು ವೇಳೆ ಸ್ವಾಮ್ಯದ ಹಕ್ಕು ಇರುವವನು ಆ ವಸ್ತುವನ್ನು ಬೇರೆ ದೇಶದಿಂದ ಆಮದು ಮಾಡಿಕೊಂಡರೂ ಸಾಕು. ಅದು ಸ್ವಾಮ್ಯದ ಬಳಕೆಯೆಂದು ಪರಿಗಣಿಸಬೇಕೆಂದು ಅಮೆರಿಕಾ ವಾದಿಸುತ್ತದೆ. ಇತ್ತೀಚೆಗೆ



06187
COMMUNITY HEALTH CELL LIBRARY AND DOCUMENTATION

GATT ಒಪ್ಪಂದಕ್ಕೆ ಭಾರತ ಸಹಿಹಾಕಿದೆ. ಈಗ ಸ್ವಾಮ್ಯವಿರುವ ವಸ್ತುವನ್ನು ಭಾರತದಲ್ಲಿ ಉತ್ಪಾದಿಸದಿದ್ದರೂ ಸಹ ಭಾರತ ಸರ್ಕಾರವು ಆ ವಸ್ತುವಿನ ಉತ್ಪಾದನೆಗೆ ಬೇರೆಯವರಿಗೆ ಅನುಮತಿ ನೀಡುವಂತಿಲ್ಲ. ಆದ್ದರಿಂದ GATT ಒಪ್ಪಂದದಿಂದ ಭಾರತದಲ್ಲಿ ಕೈಗಾರಿಕೆಗಳು ಹೆಚ್ಚುವುದಕ್ಕಿಂತ. ಮುಚ್ಚುವುದು ಹೆಚ್ಚಾಗುತ್ತದೆ.

ಪೇಟೆಂಟ್ (ಸ್ವಾಮ್ಯ) ಕಾಯದೆಗೆ ಸೂಚಿಸಿರುವ ಬದಲಾವಣೆಗಳನ್ನು ತಂದಾಗ ಬಹುರಾಷ್ಟ್ರೀಯ ಕಂಪನಿಗಳಿಗೆ ಗುತ್ತೇದಾರ ಹಕ್ಕುಗಳು ದೊರೆತು ಭಾರತದ ಗ್ರಾಹಕರು ಔಷಧ. ಬೀಜಗಳು. ಮತ್ತು ಇತರೆ ವಸ್ತುಗಳಿಗೆ ಹೆಚ್ಚಿನ ಬೆಲೆ ತೆರಬೇಕಾಗುತ್ತದೆ. ವಿದೇಶಿ ಕಂಪನಿಗಳ ತಂತ್ರಜ್ಞಾನದ ಹಿಡಿತದಲ್ಲಿ, ಭಾರತದ ವ್ಯವಸಾಯ ಸೊರಗುವಂತಾಗುತ್ತದೆ. ಔಷಧಗಳಂತೆ ಅನೇಕ ಅಗತ್ಯ ಭಾರತೀಯ ಉದ್ಯಮಗಳನ್ನು ಕಡೆಗಣಿಸಿದಂತಾಗುತ್ತದೆ. ಇದು ಭಾರತದಲ್ಲಿನ ಸಂಶೋಧನೆಯನ್ನು ಮತ್ತು ಸ್ಥಳೀಯ ಸೃಜನ ಶೀಲತೆಯ ಬೇರುಗಳನ್ನು ಕಡಿದುರುಳಿಸುತ್ತದೆ. ಸಾಮ್ರಾಜ್ಯಶಾಹಿ ಶಕ್ತಿಗಳ ಆಸೆಯನ್ನು ಪೂರೈಸಲು ಹಾತೊರೆಯುತ್ತಿರುವ ಭಾರತ ಸರ್ಕಾರವು. ಕೈಗಾರಿಕಾ ನೀತಿಯಲ್ಲಿ ಆ ಶಕ್ತಿಗಳಿಗೆ ಮಣಿದಂತೆ. ಪೇಟೆಂಟ್ ಪ್ರಶ್ನೆಯನ್ನು ಗಾಳಿಗೆ ತೂರಿ ಬಿಡುವಂತೆ ಕಾಣುತ್ತಿದೆ.

ಸ್ವಾತಂತ್ರ್ಯಕ್ಕಾಗಿ ಹೋರಾಡುವಾಗ ಮೂಡಿ ಬಂದ ಸ್ವದೇಶಿ ಚಳುವಳಿಯ ಬಳುವಳಿಯಾಗಿ ಬಂದ ಕೈಗಾರಿಕಾ ನೀತಿಯ ಚೌಕಟ್ಟು ಮತ್ತು ನಾವು ಇದುವರೆವಿಗೆ ಕೈಗೊಂಡ ಕೈಗಾರೀಕರಣದ ಪ್ರಯತ್ನಗಳನ್ನು. ಇಂದು ಬುಡಸಮೇತ ಕಿತ್ತು ಬದಲಾಯಿಸಲಾಗಿದೆ. ಅಂದಾಕ್ಷಣ ನಾವು ಪಾಲಿಸುತ್ತಿದ್ದ ಕೈಗಾರಿಕಾ ನೀತಿಗೆ ಯಾವುದೇ ಬದಲಾವಣೆ ಅನಗತ್ಯವಾಗಿತ್ತು ಎಂಬ ಅಭಿಪ್ರಾಯ ನಮ್ಮದಲ್ಲ. ಅದರಲ್ಲಿದ್ದ ಕುಂದು ಕೊರತೆಗಳನ್ನು ನಿವಾರಿಸುವ ಬದಲು. ಶ್ರೀಮಂತರು ಮತ್ತು ಬಲಾಢ್ಯರಿಗೆ ಅನುಕೂಲವಾಗುವಂತೆ ಕೈಗಾರಿಕಾ ನೀತಿಯನ್ನು ಪರಿವರ್ತಿಸಲಾಗುತ್ತಿದೆ. ಮಾರುಕಟ್ಟೆಯಲ್ಲಿ ಸ್ಪರ್ಧೆಯನ್ನು ಪ್ರೋತ್ಸಾಹಿಸುವ ಹೆಸರಿನಲ್ಲಿ, ಕೈಗಾರಿಕಾ ಬಂಡವಾಳ ಹೂಡಿಕೆಯ. ಯೋಜನೆ ಸಿದ್ಧಪಡಿಸುವ ಮತ್ತು ಲೈಸನ್ಸ್ ನೀಡುವ ಕ್ರಮಕ್ಕೆ ತಿಲಾಂಜಲಿ ನೀಡಲಾಗಿದೆ ಮತ್ತು ಗುತ್ತೇದಾರರಿಗೆ ಪೂರ್ಣ ಸ್ವಾತಂತ್ರ ನೀಡಲಾಗಿದೆ. ಹೇಗೆ. ಎಲ್ಲಿ ಮತ್ತು ಏನು ಉತ್ಪಾದನೆಯಾಗಬೇಕೆಂದು. ಸಾಮಾಜಿಕ ಆದ್ಯತೆಗಳು ತೀರ್ಮಾನಿಸುವ ಬದಲು. ಮಾರುಕಟ್ಟೆಯ ಗುತ್ತೇದಾರರು ತೀರ್ಮಾನಿಸುತ್ತಾರೆ. ಎಲ್ಲ ರೀತಿಯ ನಿಯಂತ್ರಣಗಳಿಂದಲೂ ಗುತ್ತೇದಾರರಿಗೆ ರಿಯಾಯಿತಿ ನೀಡಲಾಗಿದೆ. ಅವರು ಸಣ್ಣ ಪ್ರಮಾಣ ಕೈಗಾರಿಕೆಗಳನ್ನು ಸ್ಥಾಪಿಸಿ. ಅವುಗಳಿಗೆ ಇರುವ ಅನುಕೂಲಗಳನ್ನೂ ಪಡೆಯುವ ಅಧಿಕಾರವನ್ನು ಕೊಡಲಾಗಿದೆ. ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ಪ್ರೋತ್ಸಾಹಿಸುವ ರೀತಿ ಇದು! ಸಾರ್ವಜನಿಕ ಉದ್ಯಮಕ್ಕೆ ಮಾತ್ರ ಅಂತಿಮ ತೆರೆ ಎಳೆಯಲಾಗುತ್ತಿದೆ. ಸಾರ್ವಜನಿಕ ಉದ್ಯಮಕ್ಕೆ ಮೀಸಲಾಗಿಟ್ಟ ಕ್ಷೇತ್ರಗಳನ್ನು. ಖಾಸಗಿಯವರಿಗೂ ಈಗ ತೆರೆಯಲಾಗುತ್ತಿದೆ. ಮುಖ್ಯ ಸಾರ್ವಜನಿಕ ಉದ್ಯಮಗಳನ್ನು ಖಾಸಗೀಕರಣಗೊಳಿಸಲಾಗುವುದು ಮತ್ತು ನಷ್ಟದಲ್ಲಿರುವವನ್ನು ಮುಚ್ಚಲಾಗುವುದು. ನಷ್ಟದ ಉದ್ಯಮಗಳನ್ನು ಮುಚ್ಚಲು

ಸೂಕ್ತವಾದ ಶಾಸನಗಳನ್ನು ಜಾರಿ ಮಾಡಲು ಯೋಜಿಸಲಾಗುತ್ತಿದೆ. ಅಂಥ ಉದ್ಯಮಗಳನ್ನು ಮುಚ್ಚುವುದರಿಂದ ಸುಮಾರು 6 ಲಕ್ಷ ಜನರು ಉದ್ಯೋಗ ಕಳೆದುಕೊಳ್ಳುವರು ಎಂದು ಅಂದಾಜು ಮಾಡಲಾಗಿದೆ.

ಸೇಕಡಾ 51ರಷ್ಟು ವಿದೇಶಿ ಬಂಡವಾಳವಿರುವ ಎಲ್ಲ ವಿದೇಶಿ ಕಂಪನಿಗಳನ್ನು ಭಾರತದ ಕಂಪನಿಗಳಂತೆಯೇ ಪರಿಗಣಿಸುವುದಕ್ಕೆ ಭಾರತ ಒಪ್ಪಿದೆ. ಅಗತ್ಯವೆನಿಸಿದರೆ ಬಂಡವಾಳದಲ್ಲಿ ಸಮಪಾಲು ಇರುವ ಕಾನೂನನ್ನು ತೆಗೆದು ಹಾಗಲು ಭಾರತ ಸರ್ಕಾರ ಸಿದ್ಧವಿದೆ. ವಿದೇಶಿ ಸಹಯೋಗ ಪಡೆದಿರುವವರಿಗೆ ನಿರ್ಬಂಧಗಳನ್ನು ತೆಗೆದುಹಾಕುವುದಷ್ಟೇ ಅಲ್ಲ. ಅವರಿಗೆ ದನಾತ್ಮಕವಾದ ಪ್ರೋತ್ಸಾಹ ನೀಡಲಾಗುವುದು.

## ಅಪಾಯದಲ್ಲಿರುವ ಸಾರ್ವಭೂಮತ್ವ

ಇಷ್ಟೆಲ್ಲ ಸಹಾಯ, ಕುಮ್ಮಕ್ಕು ನೀಡುತ್ತಿದ್ದರೂ ಬಹುರಾಷ್ಟ್ರೀಯ ಕಂಪನಿಗಳು ಭಾರತಕ್ಕೆ ಬರುವುವರಲ್ಲಿ ಸರ್ಕಾರಕ್ಕೆ ಗ್ಯಾರಂಟಿಯಿಲ್ಲ. ನಿರೀಕ್ಷಿತ ಬಂಡವಾಳ ಬಹುರಾಷ್ಟ್ರೀಯ ಕಂಪನಿಗಳಿಂದ ಬರಬಹುದೆಂದು ಕಾಯುತ್ತಾ ನಮ್ಮ ಸರ್ಕಾರ ಕುಳಿತಿದೆ. ನಮಗಿಂತ ಹೆಚ್ಚು ತೊಂದರೆಯಲ್ಲಿರುವ ದೇಶಗಳು, ಬಹುರಾಷ್ಟ್ರೀಯ ಕಂಪನಿಗಳಿಗೆ ನಮಗಿಂತ ಹೆಚ್ಚಿನ ಅನುಕೂಲ ನೀಡುತ್ತಿರುವುದರಿಂದ ಅವೇಕೆ ಭಾರತಕ್ಕೆ ಬರಬೇಕು. ಪೂರ್ವ ಯುರೋಪಿನಲ್ಲಿ ದೊರಕುವ ಎಲ್ಲ ಅವಕಾಶಗಳನ್ನು ಲಪಟಾಯಿಸಲು ಆ ಕಂಪನಿಗಳು ತುದಿಗಾಲಲ್ಲಿ ಬಾಯ್ತೆರೆದು ನಿಂತಿವೆ.

ಬಹುರಾಷ್ಟ್ರೀಯ ಕಂಪನಿಗಳು ಹೇಳುವ ಷರತ್ತನ್ನು ಒಪ್ಪಿದ ಮೇಲೆಯೇ, ನಮ್ಮ ದೇಶಕ್ಕೆ ಅವು ಬರುತ್ತವೆಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಆದ್ದರಿಂದ ನಮ್ಮ ಕಷ್ಟದ ಸಮಯಕ್ಕೆ ಬಹುರಾಷ್ಟ್ರೀಯ ಕಂಪನಿಗಳು ಸಹಾಯ ಮಾಡಬಹುದೆಂದು ಕಾಯುತ್ತಿರುವುದು ಮತ್ತಷ್ಟು ಕಷ್ಟಕ್ಕೆ ಎಡೆಮಾಡಬಹುದು. ವಿದೇಶದಿಂದ ಹೆಚ್ಚಿನ ಬಂಡವಾಳವನ್ನು, ವಿದೇಶಿ ಕಂಪನಿಗಳು ತರಬೇಕೆಂದು ಭಾರತ ಸರ್ಕಾರವೇನು ಒತ್ತಾಯಿಸುತ್ತಿಲ್ಲ. ಅವು ತರುವ ಯಾವುದೇ ತಂತ್ರಜ್ಞಾನವನ್ನು ನಿರ್ವಹಿಸುವ ಅಥವಾ ಎರವಲು ಪಡೆದ ತಂತ್ರಜ್ಞಾನವನ್ನು ಪಡೆಯುವ ಬಗ್ಗೆಯೂ ಭಾರತ ಸರ್ಕಾರ ತಲೆ ಕೆಡಿಸಿಕೊಂಡಿಲ್ಲ. ಇಲ್ಲಿ ಹೂಡುವ ಉದ್ಯಮಕ್ಕೆ ಬೇಕಾದ ವಸ್ತುಗಳನ್ನು ಭಾರತದಲ್ಲಿಯೇ ಕೊಳ್ಳುವ ಅಥವಾ ಹಂತ ಹಂತವಾಗಿಯೂ ಕೊಳ್ಳುವ ಯಾವುದೇ ಷರತ್ತನ್ನೂ ಬಹುರಾಷ್ಟ್ರೀಯ ಕಂಪನಿಗಳು ತಿರಸ್ಕರಿಸಿವೆ. ಅವು ಪಡೆಯುವ ಲಾಭದ ಅರ್ಧದಷ್ಟಾದರೂ ರಫ್ತುಮಾಡಿ ವಿದೇಶಿ ವಿನಿಮಯಕ್ಕೆ ಸಹಾಯ ಮಾಡಬೇಕೆಂಬ ಯಾವ ಸಲಹೆಯೂ ಅವರಿಗೆ ಒಪ್ಪಿಗೆಯಿಲ್ಲ. *ಒಟ್ಟಿನಲ್ಲಿ ವಿದೇಶಿ ಕಂಪನಿಗಳಿಗೆ ಪೂರ್ಣ ಶರಣಾಗತರಾಗುವುದು ನಡೆಯುತ್ತಿದೆ.*

ರಫ್ತಿನಲ್ಲಿ ತೀವ್ರ ಹೆಚ್ಚಳ ಉಂಟಾಗುವ ಸಾಧ್ಯತೆಯೂ ತುಂಬಕಡಿಮೆ. ಪೂರ್ವ ಯುರೋಪಿನ ದೇಶಗಳ ಪತನ ಅಥವಾ ಪಶ್ಚಿಮ ಯುರೋಪಿನ ಐಕ್ಯತೆಯನ್ನು ಲೆಕ್ಕಿಸದೆ ಹೋದರೂ ಸಹ. ವ್ಯಾಪಾರದ ಉದಾರ ನೀತಿಗೆ`ಈ ಕಾಲವೇ ಸೂಕ್ತವೆಂದು ಭಾರತ ತೀರ್ಮಾನಿಸಿರುವುದು ತಪ್ಪು. ಅರವತ್ತರ ದಶಕದಲ್ಲಿ ಜಾಗತಿಕ ವ್ಯಾಪಾರವು ತೀವ್ರ ಗತಿಯಲ್ಲಿ ಹೆಚ್ಚಾಯಿತು. ಆದರೆ ಕಳೆದ ಹದಿನೈದು ವರ್ಷಗಳಲ್ಲಿ ಜಾಗತಿಕ ಆರ್ಥಿಕ ವ್ಯವಸ್ಥೆ ಮತ್ತು ವ್ಯಾಪಾರ ಮಂದಗತಿಯಲ್ಲಿ ವಿಸ್ತಾರವಾಗುತ್ತಿದೆ. ವಿಶ್ವವ್ಯಾಪಾರದಲ್ಲಿಯಂತೂ ಇದು ಸತ್ಯ. ಇತ್ತೀಚಿನ ವರ್ಷಗಳಲ್ಲಿ ರಫ್ತು ಹೆಚ್ಚಿಸಲು ನಾವು ನಡೆಸಿದ ಎಲ್ಲ ಪ್ರಯತ್ನಗಳೂ ಮಣ್ಣುಪಾಲಾದವು. ಬರುವ ವರ್ಷಗಳಲ್ಲಿ ಮಾಂತ್ರಿಕ ಬದಲಾವಣೆಗಳು ಬರಲಿವೆ ಎಂದು ನಂಬುವುದಕ್ಕೆ ಯಾವ ಆಧಾರಗಳೂ ಇಲ್ಲ.

ಮೇಲೆ ತಿಳಿಸಿದ ಅಭಿವೃದ್ಧಿಯ ನೂತನ ಹಾದಿಗಿಂತ ಮಾರಕವಾದುದು ಮತ್ತೊಂದಿಲ್ಲ. ಸಾಲ ತೀರಿಸಲು ಮತ್ತು ಆರ್ಥಿಕ ಸ್ಥಗಿತವನ್ನು ತೊಡೆದು ಹಾಕಲು ರಫ್ತನ್ನು ತೀವ್ರವಾಗಿ ಹೆಚ್ಚಿಸಲೇ ಬೇಕು. ದೊರೆಯುವ ಎಲ್ಲ ಮೂಲಗಳಿಗೂ ಕೈಹಾಕಿ, ನಾವಿಂದು ಸಾಲ ಮಾಡುತ್ತಿರುವ ರೀತಿಯನ್ನು ಮುಂದುವರೆಸಿದ್ದೇ ಆದರೆ ಇನ್ನು ಎರಡು ಮೂರು ವರ್ಷಗಳಲ್ಲಿ, ಸಾಲದ ಪ್ರಮಾಣವು ಇಂದಿರುವ ಒಟ್ಟು ಸಾಲದ ಮೊತ್ತ 72 ಬಿಲಿಯನ್ ಡಾಲರುಗಳಿಂದ 100 ಬಿಲಿಯನ್ ಡಾಲರುಗಳಷ್ಟು ಏರುತ್ತದೆಂದು ಹೇಳಲಾಗಿದೆ. ಈ ಸಾಲಗಳ ಮೇಲಿನ ಬಡ್ಡಿ ಹಾಗೂ ಮರುಪಾವತಿಯ ಕಂತಿನ ಪ್ರಮಾಣವೇ ಪ್ರತಿ ವರ್ಷಕ್ಕೆ 20,000 ಕೋಟಿಗಳಾಗುತ್ತದೆ. ಇಂದು ರಫ್ತು ಏರುತ್ತಿರುವ ಪ್ರಮಾಣದಲ್ಲಿ ಹೆಚ್ಚಾದರೂ ಮರು ಪಾವತಿಯ ಪ್ರಮಾಣ ರಫ್ತಿನ ಸೇಕಡಾ40 ರಷ್ಟಾಗುತ್ತದೆ. ರಫ್ತಿನ 40ರಿಂದ 45ರಷ್ಟು ಪ್ರಮಾಣವನ್ನು ಮರುಪಾವತಿಗೆ ಮೀಸಲಾಗಿಡುವ ಸ್ಥಿತಿ ತಲುಪಿರುವ ಯಾವ ದೇಶವೂ ಆ ವಿಷ ವರ್ತುಲದಿಂದ ಪಾರಾದ ಉದಾಹರಣೆಯಿಲ್ಲ. ವಿದೇಶಿ ವಿನಿಮಯದ ಖೋತಾ ಮತ್ತಷ್ಟು ಹೆಚ್ಚುವ ಸಮಯ ಅತಿದೂರವಿಲ್ಲವೆನಿಸುತ್ತದೆ.

ಮುಂಬರಲಿರುವ ಸಂಕಷ್ಟಕರ ಸಮಯದಲ್ಲಿ ವಿದೇಶಗಳು ನಮ್ಮ ಮೇಲೆ ಏರಬಹುದಾದ ನಿರ್ಬಂಧಗಳನ್ನು ಊಹಿಸಲೂ ಅಸಾಧ್ಯ. ಇಂದು ನಮ್ಮ ಆರ್ಥಿಕ ವ್ಯವಸ್ಥೆಯನ್ನು ನಿರ್ವಹಿಸುವ ಮತ್ತು ಆರ್ಥಿಕ ಸುಧಾರಣೆಗಳನ್ನು ಸೂಚಿಸುವ ಸ್ಥಾನ ದೊರಕಿರುವುದಕ್ಕೆ ಅವರಿಗೆ ತೃಪ್ತಿ ಇದ್ದಂತೆ ಕಾಣುತ್ತದೆ. ಅವರ ವಿಶ್ವಾಸವನ್ನು ಗಳಿಸಲು ಭಾರತ ಮತ್ತಷ್ಟು ಬಗ್ಗಲು ಸಿದ್ಧವಿದೆ. ವಿದೇಶಿ ಬಂಡವಾಳ ಹೂಡುವವರ ವಿಶ್ವಾಸ ಗಳಿಸಲು ನಮ್ಮ ನಾಯಕರು ಯಾವ ಕ್ರಮ ಕೈಗೊಳ್ಳಲೂ ಕಂಕಣ ಬದ್ಧರಾಗಿ ನಿಂತಿದ್ದಾರೆ! ಭವ್ಯ ಭಾರತದ ಸ್ಥಾನ ಮಾನ ಇಂದು ಇಂತಹ ಹೀನ ಸ್ಥಿತಿ ತಲುಪಿದೆ!

ಇತ್ತೀಚೆಗೆ ದೆಹಲಿಯಲ್ಲಿ ನಡೆದ ಚಿಕ್ಕ ಘಟನೆಯೊಂದನ್ನು ನೆನಪಿಸಿಕೊಳ್ಳೋಣ. ಭಾರತಕ್ಕೆ ಸಹಾಯ ಮಾಡುವ ಎಲ್ಲ ಸರ್ಕಾರಗಳು ಪ್ಯಾರಿಸ್ಸಿನಲ್ಲಿ ಸಭೆ ಸೇರುವ ಮೊದಲು ದೆಹಲಿಯಲ್ಲಿ ವಿಶ್ವ ಬ್ಯಾಂಕ್ ಅಧಿಕಾರಿಗಳ ಜೊತೆ ಸಿದ್ಧತಾ ಸಭೆ ನಡೆಸಿದ್ದವು. ಅದೇ

ವೇಳೆಯಲ್ಲಿ ರಸಾಯನಿಕ ಗೊಬ್ಬರಗಳಿಗೆ ನಿಲ್ಲಿಸಿದ್ದ ಸಬ್ಸಿಡಿಯನ್ನು ಮುಂದುವರೆಸಬೇಕೆಂಬ ಒತ್ತಾಯ ಲೋಕ ಸಭೆಯಲ್ಲಿ ನಡೆಯುತ್ತಿತ್ತು. ವಿಶ್ವ ಬ್ಯಾಂಕ್ ಅಧಿಕಾರಿಗಳ ಜೊತೆ ಭಾರತ ಸರ್ಕಾರದ ಸಚಿವರ ನಾಯಕತ್ವವಿರುವ ತಂಡವು ಚರ್ಚೆ ನಡೆಸುವಾಗ, ಸಿಟ್ಟಿಗೆದ್ದ ವಿಶ್ವಬ್ಯಾಂಕ್ ಅಧಿಕಾರಿಗಳು ಭಾರತ ಸರ್ಕಾರಕ್ಕೆ ರಾಜಕೀಯ ನಿರ್ಧಾರವಿಲ್ಲವೆಂದು ಮತ್ತು ದೇಶದ ರಾಜಕೀಯ ನಿರ್ವಹಣೆಗೆ ತಾವು ಉಪಯುಕ್ತ ಸಲಹೆ ನೀಡುತ್ತೇವೆಂದು ತಿಳಿಸಿದರು. ಭಾರತದ ತಂಡ ಏನು ಆಶ್ವಾಸನೆ ನೀಡಿತೋ ತಿಳಿಯದು. ಆದರೆ ಸರ್ಕಾರದ ಆರ್ಥಿಕ ಸುಧಾರಣೆಗಳನ್ನು ಪ್ರೋತ್ಸಾಹಿಸುತ್ತಿದ್ದ. 'ಹಿಂದೂ' ಪತ್ರಿಕೆ ಸಂಪಾದಕೀಯ ಬರೆದು, ಅದರಲ್ಲಿ ವಿಶ್ವ ಬ್ಯಾಂಕ್ ಅಧಿಕಾರಿಗಳ ಅಧಿಕ ಪ್ರಸಂಗದ ಮಾತುಗಳನ್ನು ಉಗ್ರವಾಗಿ ಖಂಡಿಸಿತು ಮತ್ತು ವಿದೇಶಿ ಸಹಾಯವಿಲ್ಲದೆ ನಡೆಸುವ ಕಾರ್ಯಗಳಲ್ಲಿ ದೇಶದ ರಾಜಕೀಯ ನಿರ್ವಹಣೆ ಇನ್ನೂ ಸೇರಿದೆ ಎಂದು ತಿಳಿಸಿತು. ಭವಿಷ್ಯದಲ್ಲಿಯೂ ಈ ಕಾರ್ಯ ನಮ್ಮಲ್ಲಿ ಇರಲಿ ಎಂದು ಆಶಿಸುತ್ತೇವೆ. ಆದರೆ ಅಪಾಯದ ಸೂಚನೆಗಳು ಕಾಣುತ್ತಿವೆ. ನಾವೆತ್ತ ಸಾಗುತ್ತಿದ್ದೇವೆ? ನಮ್ಮ ಸ್ವಾತಂತ್ರ ಅಪಾಯವಲ್ಲದೆ.

## ಬದಲು ಆರ್ಥಿಕ ನೀತಿಯ ಕಡೆಗೆ

ಭಾರತೀಯರ ರಾಷ್ಟ್ರಪ್ರೇಮದಲ್ಲಿ ನಮಗೆ ವಿಶ್ವಾಸವಿದೆ. ವಿದೇಶಿಯರ ಆಳ್ವಿಕೆಯಿಂದ ಸ್ವಾತಂತ್ರ್ಯಗಳಿಸುವುದಕ್ಕೆ ಅಪಾರವಾದ ಸಾವು ನೋವುಗಳನ್ನು ಜನರು ಅನುಭವಿಸಿದ್ದಾರೆ. ಕಷ್ಟದಿಂದ ಪಡೆದ ಸ್ವಾತಂತ್ರ್ಯವನ್ನು ರಕ್ಷಿಸಲು ಅವರು ಮುಂದಾಗುತ್ತಾರೆ. ದೇಶವು ತನ್ನ ಕಾಲ ಮೇಲೆ ನಿಲ್ಲುವುದಕ್ಕೆ ಬೇಕಾದ ತ್ಯಾಗಗಳನ್ನು ಮಾಡಲು ಕೇಳುವ ಬದಲು ಇಂದಿರುವ ನಾಯಕರು ವಿದೇಶಗಳಿಂದ ಹೆಚ್ಚೆಚ್ಚು ಸಾಲ ಪಡೆಯಲು ಅನುಕೂಲವಾಗುವಂತಹ ಮತ್ತು ಅಂತರರಾಷ್ಟ್ರೀಯ ಲೇವಾದೇವಿಗಾರರನ್ನು ಸಂತುಷ್ಟಗೊಳಿಸುವ ಕಾರ್ಯಗಳಿಗೆ ತ್ಯಾಗ ಮಾಡಲು ಕರೆ ನೀಡುತ್ತಿದ್ದಾರೆ. ಆದ್ದರಿಂದ ಅವರು ರಾಷ್ಟ್ರೀಯ ಪ್ರಜ್ಞೆಗೆ ಮೊರೆ ಹೋಗಿ ತ್ಯಾಗ ಮಾಡಲು ಸೂಚಿಸುತ್ತಿದ್ದಾರೆ. ಸ್ವಾವಲಂಬಿತ ಪ್ರಗತಿಗೆ ಮೊದಲ ಪ್ರಾಶಸ್ತ್ಯ ನೀಡಿ, ವಿದೇಶಿ ಶಕ್ತಿಗಳಿಗೆ ಶರಣಾಗುವುದಿಲ್ಲವೆಂಬ ದೃಢ ನಿರ್ಧಾರ ತೆಗೆದುಕೊಂಡರೆ ಇಂದಿರುವ ಸಮಸ್ಯೆಯನ್ನು ಎದುರಿಸಬಹುದು. ಶ್ರೀಮಂತರು ತಮ್ಮ ಪಾಲಿನ ತ್ಯಾಗ ಮಾಡುವುದಾದರೆ, ಎಲ್ಲ ಜನರು ತ್ಯಾಗ ಮಾಡಲು ಸಿದ್ಧರಿದ್ದಾರೆ. ನಮ್ಮ ಜನರ ಮೇಲೆ ವಿಶ್ವಾಸವಿಡುವುದಕ್ಕಿಂತ ಹೆಚ್ಚಿಗೆ ಈ ಸರ್ಕಾರಕ್ಕೆ ಅಂತರರಾಷ್ಟ್ರೀಯ ಲೇವಾದೇವಿಗಾರರ ಆಶ್ವಾಸನೆಗಳ ಮೇಲೆ ಹೆಚ್ಚು ನಂಬಿಕೆಯಿರುವಂತಿದೆ. ಬಹುರಾಷ್ಟ್ರೀಯ ಕಂಪನಿಗಳಿಗೆ ತೃಪ್ತಿ ಪಡಿಸುವ ನೀತಿ ರಚಿಸುವವರು, ವಿದೇಶಿ ಒತ್ತಡಗಳಿಗೆ ತಲೆಬಾಗುವವರು ಮತ್ತು ವಿದೇಶಿ ಸಾಲಗಳಿಗೆ ಬಾಯಿ ಬಿಡುವವರು ಹೇಗೆ ಜನರ ಸ್ವಾಭಿಮಾನ ಹಾಗೂ ರಾಷ್ಟ್ರಪ್ರೇಮವನ್ನು ಬಳಸಿಕೊಳ್ಳಲು ಸಾಧ್ಯ ? ಮತ್ತೊಂದು ಪುಡಿಕಾಸನ್ನು ವಿದೇಶಗಳಿಂದ ತರುವುದಿಲ್ಲವೆಂದು ತೀರ್ಮಾನಿಸೋಣ. ಈಗಿರುವ ಸಾಲದ ಹೊರೆ ಇಳಿಸಲು ಸಾರ್ವಜನಿಕ ಕರೆ ನೀಡಿ ಹಣ

ಸಂಗ್ರಹಿಸೋಣ. ಆಗ ರಾಷ್ಟ್ರೀಯ ಪ್ರಜೆಯನ್ನು, ನಾವು ಬೆಳೆಸಿ ರಾಷ್ಟ್ರ ಪ್ರೇಮವಿರುವ ಹೊಸ ಆರ್ಥಿಕ ನೀತಿಯನ್ನು ರೂಪಿಸೋಣ.

ಸ್ವಾವಲಂಬಿತ ಪ್ರಗತಿಯ ಪಥದಲ್ಲಿ ಮೊದಲ ಹೆಜ್ಜೆಗಳಾಗಿ ಸರ್ಕಾರದ ಬಜೆಟ್‌ಗಳ ಖೋತಾ ಕಡಿಮೆ ಮಾಡಬೇಕು. ದೇಶದ ಬಾಹ್ಯ ವ್ಯಾಪಾರ ವಹಿವಾಟುಗಳಲ್ಲಿ ವಿದೇಶಿ ವಿನಿಮಯವನ್ನು ಕಡಿಮೆ ಮಾಡಲು ತುರ್ತು ಕ್ರಮಗಳನ್ನು ಕೈಗೊಳ್ಳಬೇಕು. ಭೋಗ ವಸ್ತುಗಳ ಆಮದಿನ ಮೇಲೆ ಬಿಗಿಯಾದ ಕಾನೂನು ಜಾರಿಗೊಳಿಸಬೇಕು. ವಿದೇಶಿ ವಿನಿಮಯ ಉಳಿಸುವ ಯಂತ್ರ ಹಾಗೂ ಅದರ ಭಾಗಗಳ ಉತ್ಪಾದನೆಗೆ ಯೋಜನೆಯೊಂದು ಸಿದ್ಧಪಡಿಸಬೇಕು. ಶಸ್ತ್ರಾಸ್ತ್ರಗಳ ಆಮದಿನಲ್ಲಿ ತೀವ್ರ ಕಡಿತವಾಗಬೇಕು. ಪೆಟ್ರೋಲ್ ಎಣ್ಣೆಯ ಬಳಕೆಯ ಮೇಲೆ ತೀವ್ರ ಹಿಡಿತ ಸಾಧಿಸಬೇಕು. ವಿದೇಶಗಳಲ್ಲಿ ನೌಕರಿ ಮಾಡುತ್ತಿರುವ ಭಾರತೀಯರು ಅವರ ಉಳಿತಾಯವನ್ನು ಅಧಿಕೃತಮಾರ್ಗಗಳಲ್ಲಿ ಕಳುಹಿಸುವಂತೆ ಪ್ರೇರಣೆ ನೀಡಬೇಕು. ವಿಶೇಷ ಅನುಕೂಲ ಅವರಿಗೆ ಸಿಗುವಂತೆ ಮಾಡಬೇಕು. ಅಲ್ಲದೆ ವಿದೇಶಿ ವಿನಿಮಯದಲ್ಲಿ ಅಪಮಾರ್ಗ ಅನುಸರಿಸುವವರನ್ನು ಉಗ್ರ ಶಿಕ್ಷೆಗೆ ಒಳಪಡಿಸಬೇಕು. 1989ರಲ್ಲಿ ವಿದೇಶಗಳಿಂದ ಟೆಂಡರ್ ಕರೆಯುವ ಮಾರ್ಗವೊಂದರಲ್ಲಿಯೇ 3189 ಮಿಲಿಯನ್ ಡಾಲರುಗಳ ವಿದೇಶಿ ವಿನಿಮಯ ಸೋರಿ ಹೋಗಿದೆಯೆಂದು ಅಂದಾಜು ಮಾಡಲಾಗಿದೆ. ಇದೇ ರೀತಿಯ ಅಪಮಾರ್ಗಗಳಿಂದ ಎಂಬತ್ತರ ದಶಕದಲ್ಲಿ ಭಾರತವು 14 ಬಿಲಿಯನ್ ಡಾಲರುಗಳಷ್ಟು ಹಣವನ್ನು ಕಳೆದುಕೊಂಡಿದೆ ಎಂದೂ ಅಂದಾಜು ಮಾಡಲಾಗಿದೆ. ಮೇಲೆ ಸೂಚಿಸಿದ ಕಳ್ಳ ಮಾರ್ಗಗಳ ಮೇಲಿನ ಪೂರ್ಣ ಹತೋಟಿ ಮತ್ತು ಚಿನ್ನದ ಕಳ್ಳಸಾಗಾಣಿಕೆಯನ್ನು ನಿಲ್ಲಿಸುವುದರಿಂದ, ವಿದೇಶಿ ವಿನಿಮಯದ ಸ್ಥಿತಿಯೇ ಪೂರ್ಣವಾಗಿ ಬದಲಾಗುತ್ತದೆ. ಭಾರತದಲ್ಲಿ ಬಳಕೆಯಲ್ಲಿ ಇಲ್ಲದ ಅಪಾರ ಪ್ರಮಾಣದ ಚಿನ್ನವನ್ನು ಹೊರತೆಗೆಯಲು ಸೂಕ್ತವಾದ ಚಿನ್ನದ ಬಾಂಡ್ ಯೋಜನೆಯನ್ನು ತರಬೇಕು.

ಬಜೆಟ್ ಖೋತ ಕಡಿಮೆ ಮಾಡಬೇಕಾದರೆ ಅಭಿವೃದ್ಧಿಯೇತರ ವೆಚ್ಚದಲ್ಲಿ ತೀವ್ರ ಕಡಿತ ತರಬೇಕು. ಸೂಕ್ತ ರಾಜಕೀಯ ಕಾರ್ಯಕ್ರಮಗಳ ಮೂಲಕ ರಕ್ಷಣೆ ಸೈನ್ಯದ ಮತ್ತು ಆಂತರಿಕ ಭದ್ರತಾ ವ್ಯವಸ್ಥೆಯಲ್ಲಿ ಉಳಿತಾಯ ಮಾಡಬಹುದು. ಚೀನಾ ಜೊತೆ ಗಡಿ ಒಪ್ಪಂದ ಸಾಧಿಸಿದರೆ ಹೆಚ್ಚು ಉಳಿತಾಯ ಸಾಧಿಸಬಹುದು. ಭಾರತದ ಸುತ್ತಮುತ್ತ ಪರಮಾಣು ಅಸ್ತ್ರಗಳ ಪೈಪೋಟಿಯನ್ನು ನಿಲ್ಲಿಸಲು ಎಲ್ಲ ಪ್ರಯತ್ನಗಳನ್ನು ಮಾಡಬೇಕು. ಕಾರ್ಮಿಕರ ಮತ್ತು ಅಧಿಕಾರಿಗಳ ಪಾಲ್ಗೊಳ್ಳುವಿಕೆಯ ನಿರ್ವಹಣೆಯಿಂದ, ರಾಜಕೀಯ ಶಕ್ತಿಗಳು ಮಧ್ಯ ಪ್ರವೇಶ ಮಾಡದಂತೆ ಮಾಡುವುದರಿಂದ, ಅಧಿಕಾರಶಾಹಿಯನ್ನು ದೂರವಿಡುವುದರಿಂದ ಮತ್ತು ಯಂತ್ರಗಳ ಆಧುನೀಕರಣಕ್ಕೆ ಅಗತ್ಯವಾದ ಹಣ ನೀಡುವುದರಿಂದ, ಸಾರ್ವಜನಿಕ ಉದ್ಯಮಗಳಿಗೆ ಬಜೆಟ್‌ನಲ್ಲಿನ ಸಹಾಯಧನವನ್ನು ಕಡಿಮೆ ಮಾಡಬಹುದು. ಇಂತಹ ಅನೇಕ ಕ್ರಮಗಳಿಂದ ಸರ್ಕಾರದ ವೆಚ್ಚವನ್ನು ತಗ್ಗಿಸಬಹುದು. ಶ್ರೀಮಂತರಿಗೆ ಸಬ್ಸಿಡಿ ನಿಲ್ಲಿಸಬೇಕು. ಬಡವರಿಗೆ ಸಬ್ಸಿಡಿ ದೊರಕುವಂತೆ ಕಟ್ಟೆಚ್ಚರದ ನಿಯಂತ್ರಣವಿರಬೇಕು. ನೇರ

ತೆರಿಗೆಯ ಜಾಲವನ್ನು ಹೆಚ್ಚಿಸಿ. ಜಮೀನುದಾರರಿಂದಲೂ ತೆರಿಗೆ ಸಂಗ್ರಹಿಸಬೇಕು ಮತ್ತು ತೆರಿಗೆ ಸಂಗ್ರಹ ವಿಧಾನದ ದಕ್ಷತೆ ಹೆಚ್ಚಿಸಬೇಕು. ತೆರಿಗೆ ಕಳ್ಳರ ಮನಮೆಚ್ಚಿಸುವ ಈಗಿರುವ ಕ್ರಮದ ಬದಲು, ಅವರ ಮೇಲೆ ಕ್ರಮಕೈಗೊಳ್ಳಲು ವಿಶಿಷ್ಟ ಕಾರ್ಯಕ್ರಮ ಹಮ್ಮಿಕೊಳ್ಳಬೇಕು.

ವಿದೇಶಿ ವಿನಿಮಯದ ಮತ್ತು ಬಜೆಟ್ ಸಮಸ್ಯೆಗಳನ್ನು ಸರಿದೂಗಿಸಲು, ಈ ಕ್ರಮಗಳನ್ನು ಕೈಗೊಳ್ಳುವ ಜೊತೆಗೆ ದೀರ್ಘಕಾಲಿಕ ಅಭಿವೃದ್ಧಿ ಕಾರ್ಯಕ್ರಮಕ್ಕೆ ಕಾಯಕಲ್ಪ ಚಿಕಿತ್ಸೆ ನೀಡಲು ಸಿದ್ಧರಾಗಬೇಕು. ಅಂತಹ ಕೆಲವು ಮುಖ್ಯ ಸಾಧ್ಯತೆಗಳನ್ನು ಈಗ ಪರೀಕ್ಷಿಸೋಣ. ಶ್ರೀಮಂತರ ಮೇಲೆ ಅವಲಂಬಿಸಿರುವ ಹಸಿರು ಕ್ರಾಂತಿಯ ಬದಲು ಸ್ಥಳೀಯ ಸಂಪನ್ಮೂಲಗಳ ಮೇಲೆ ಒತ್ತು ನೀಡುವ, ಮಣ್ಣು ಮತ್ತು ನೀರಿನ ವೈಜ್ಞಾನಿಕ ನಿರ್ವಹಣೆ, ಸಮುದಾಯ ವ್ಯವಸಾಯ ಮತ್ತು ನಿರ್ವಹಣಾ ವ್ಯವಸ್ಥೆಗಳಿಗೆ ಪ್ರಾಶಸ್ತ್ಯ ನೀಡುವ ಹೊಸ ಕೃಷಿ ನೀತಿ ಜಾರಿಗೆ ಬರಬೇಕು. ಜನರ ಕೊಳ್ಳುವ ಶಕ್ತಿ ಹೆಚ್ಚು ಮಾಡುವ ಭೂಸುಧಾರಣೆಗಳು ಜಾರಿಯಾಗಬೇಕು. ಸ್ವಾವಲಂಬಿತ ಬೆಳವಣಿಗೆಗೆ ದೇಶದ ಸಮಗ್ರ ಕೈಗಾರಿಕಾ ಅಭಿವೃದ್ಧಿ ಅಗತ್ಯ. ಇದಕ್ಕಾಗಿ ಆಂತರಿಕ ಮಾರುಕಟ್ಟೆಯಲ್ಲಿ ಸ್ಪರ್ಧೆ ಹೆಚ್ಚಾಗಬೇಕು. ಸಂಪ್ರದಾಯಿಕ ಕೈಗಾರಿಕೆಗಳಲ್ಲಿ ಆಡಳಿತದ ರಚನೆ ಮತ್ತು ಕೌಶಲಗಳನ್ನು ಉತ್ತಮಪಡಿಸುವ ಕಾರ್ಯ ಹೆಚ್ಚಾಗಬೇಕು; ಸಾರ್ವಜನಿಕ ಉದ್ಯಮಗಳ ದಕ್ಷತೆ ಉತ್ತಮವಾಗಬೇಕು. ನವೀನ ತಂತ್ರಜ್ಞಾನದ ಅಳವಡಿಕೆಯಾಗಬೇಕು. ಬಹುರಾಷ್ಟ್ರೀಯ ಕಂಪನಿಗಳಿಗೆ ಮತ್ತು ವಿದೇಶಿ ತಂತ್ರಜ್ಞಾನ ಸಹಯೋಗವಿರುವವರಿಗೆ ಆರ್ಥಿಕ ವ್ಯವಸ್ಥೆಯನ್ನು ತೆರೆಯಬಾರದು. ಒಂದು ವೇಳೆ ಬಹುರಾಷ್ಟ್ರೀಯ ಕಂಪನಿಗಳಿಗೆ ಆಹ್ವಾನ ನೀಡಿದರೂ ಸಹ, ಅದು ಆಯ್ದ ಕ್ಷೇತ್ರಗಳಿಗೆ ಹಾಗೂ ಭಾರತದ ಕಂಪನಿಗಳಿಗೆ ಉತ್ಪಾದಿಸಲು ಸಾಧ್ಯವಿಲ್ಲದ ಕ್ಷೇತ್ರಗಳಿಗೆ ಮಾತ್ರ ಸೀಮಿತವಾಗಿರಬೇಕು. ಸ್ಥಳೀಯ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುವ ವಿಜ್ಞಾನ ಮತ್ತು ತಂತ್ರಜ್ಞಾನದ ನೀತಿಯೊಂದನ್ನು ನಿರ್ಮಿಸುವುದು. ಭಾರತವು ಸ್ವಾಯತ್ತತೆಯತ್ತ ಸಾಗುವುದಕ್ಕೆ ಬಹಳ ಪ್ರಮುಖವಾದುದು. ಸಂಶೋಧನಾ ಸಂಸ್ಥೆಗಳಿಗೆ, ಸಂಶೋಧನೆ ಮತ್ತು ಅಭಿವೃದ್ಧಿಗೆ ಹಾಗೂ ಉನ್ನತ ಶಿಕ್ಷಣ ಮತ್ತು ಉದ್ಯೋಗಗಳ ತರಬೇತಿಗಳಿಗೆ ಸರ್ಕಾರವು ನೀಡುವ ಹಣದ ಮೊತ್ತವು ಸಾಕಷ್ಟು ಪ್ರಮಾಣದಲ್ಲಿ ಹೆಚ್ಚಾಗಬೇಕು.

ರಾಷ್ಟ್ರೀಯ ಪುನಶ್ಚೇತನದ ಕಾರ್ಯಕ್ರಮಕ್ಕೆ ಆಡಳಿತದ ಮತ್ತು ಪ್ರಗತಿಯ ಚಟುವಟಿಕೆಗಳ ವಿಕೇಂದ್ರೀಕರಣವು ಅಗತ್ಯವಾದ ಸಂಘಟನಾ ಚೌಕಟ್ಟು. ರಾಜ್ಯಗಳಿಗೆ ಹೆಚ್ಚಿನ ಅಧಿಕಾರ ನೀಡಬೇಕು. ರಾಜ್ಯಗಳಲ್ಲಿ ಯಾವುದೇ ಸರ್ಕಾರವಿರಲಿ ಹೆಚ್ಚಿನ ಅಧಿಕಾರವನ್ನು ಜಿಲ್ಲೆಗಳಿಗೆ ಮತ್ತು ಪಂಚಾಯಿತಿಗಳಿಗೆ ನೀಡಬೇಕು. ಯಾವ ಹಂತದಲ್ಲಿ ಕೆಲಸ ಸಾಗಬೇಕೋ, ಅಲ್ಲಿಯ ಜನರಿಗೇ ಅದನ್ನು ಜಾರಿಗೊಳಿಸುವ ಅಧಿಕಾರವಿರಬೇಕು. ಮಿಕ್ಕ ಅಧಿಕಾರಗಳು ಮೇಲಿನ ಸರ್ಕಾರಕ್ಕಿರಬೇಕು.

ಈ ಮೇಲೆ ಸೂಚಿಸಿರುವ ಕಾರ್ಯಕ್ರಮಗಳ ಜೊತೆಗೆ ರಾಷ್ಟ್ರಕ್ಕೆ ಅಗತ್ಯ ಆದ್ಯತೆಗಳ ಕಾರ್ಯಕ್ರಮಯೊಂದನ್ನು ಘೋಷಿಸಬೇಕು. ದೇಶದ ಎಲ್ಲ ಪ್ರಜೆಗಳಿಗೆ ಕನಿಷ್ಠ ಆಹಾರ, ಬಟ್ಟೆ, ಮತ್ತು ವಸತಿಯನ್ನು ಖಾತ್ರಿಗೊಳಿಸುವ ಅಂಶವು ಆ ನೂತನ ಕಾರ್ಯಕ್ರಮದಲ್ಲಿರಬೇಕು. ದಕ್ಷ ಸಾರ್ವಜನಿಕ ವಿತರಣಾ ಪದ್ಧತಿ ಮತ್ತು ಎಲ್ಲರಿಗೆ ಉದ್ಯೋಗದ ಖಾತ್ರಿಯನ್ನು ನೀಡುವ ವ್ಯವಸ್ಥೆ ಈ ಯೋಜನೆಯ ಉದ್ದೇಶವಾಗಿರಬೇಕು. ಅನಕ್ಷರತೆಯನ್ನು ತೊಲಗಿಸಿ, ಪ್ರಾಥಮಿಕ ಆರೋಗ್ಯ ಮತ್ತು ಕುಡಿಯುವ ನೀರನ್ನು ಎಲ್ಲರಿಗೂ ಒದಗಿಸುವಂತಿರಬೇಕು. ಇವುಗಳಿಂದ ಜೀವನದ ಮಟ್ಟವು ಉತ್ತಮವಾಗಿ ಚಿಕ್ಕ ಸಂಸಾರ ಪದ್ಧತಿ ಯಶಸ್ವಿಯಾಗುವಂತಾಗಬೇಕು.

ನಮ್ಮ ಹೇಳಿಕೆಗಳು ಹೆಚ್ಚು ಸಂಕ್ಷಿಪ್ತವಾಗಿವೆ ಮತ್ತು ಸ್ಥೂಲರೂಪವನ್ನಷ್ಟೇ ನೀಡುತ್ತವೆ. ಆದರೆ ನಮ್ಮ ಅಭಿಪ್ರಾಯ ಸ್ಪಷ್ಟ. IMF ಹಾಗೂ ವಿಶ್ವ ಬ್ಯಾಂಕ್ ನಿರ್ದೇಶಿಸುತ್ತಿರುವ ಮಾರ್ಗಕ್ಕಿಂತ ಭಿನ್ನವಾದ ಮಾರ್ಗವೊಂದಿದೆ. ಈ ಬದಲು ದಾರಿಯಲ್ಲಿ ವಿದೇಶಿ ವಿನಿಮಯದ ಕೊರತೆಯನ್ನು ನೀಗಿಸಲು, ಸರ್ಕಾರದ ಖೋತಾ ಬಜೆಟ್ ಕಡಿಮೆ ಮಾಡಲು, ಸ್ವಾವಲಂಬಿತ ಕೃಷಿ ಹಾಗೂ ಕೈಗಾರಿಕಾ ಪ್ರಗತಿ ಸಾಧಿಸಲು, ವಿಕೇಂದ್ರಿಕರಣದ ರಾಜಕೀಯ ರಚನೆ ರಚಿಸಲು ಅವಕಾಶವಿದೆ ಮತ್ತು ಪ್ರತಿಯೊಬ್ಬ ನಾಗರೀಕನಿಗೂ ಮೂಲ ಅಗತ್ಯಗಳನ್ನು ಪೂರೈಸಲು ಬೇಕಾದ ರಾಷ್ಟ್ರ ಬದ್ಧತೆಗೆ ಅವಕಾಶವಿದೆ. ನಮ್ಮನ್ನು ನಿಶ್ಯಕ್ತರನ್ನಾಗಿ ಮಾಡಿ, ಗುಲಾಮಗಿರಿಗೆ ತಳ್ಳುವ ಬದಲಾವಣೆಗಳನ್ನು ತರುವುದು IMF ಮತ್ತು ವಿಶ್ವ ಸಂಸ್ಥೆಗೆ ಬೇಕಿದೆ. ಆದರೆ ನಮ್ಮ ಜನರ ಜೀವನದ ಗುಣ ಮಟ್ಟ ಉತ್ತಮಪಡಿಸುವ ಹಾಗೂ ದೇಶದ ಸ್ವಾವಲಂಬಿತ ಪ್ರಗತಿಯನ್ನು ಖಾತ್ರಿಗೊಳಿಸುವ ಸುಧಾರಣೆಗಳನ್ನು ಜಾರಿ ಮಾಡುವ ಆಸೆ ನಮಗಿದೆ.

ಅನುವಾದ : ಶ್ರೀ. ಎಚ್. ಎಸ್. ನಿರಂಜನಾರಾಧ್ಯ

ಸಂಪರ್ಕ ವಿಳಾಸಗಳು :

1. ಭಾರತ ಜ್ಞಾನ ವಿಜ್ಞಾನ ಸಮಿತಿ
C/o ಎಲೆಕ್ಟ್ರೋ ಕೆಮಿಕಲ್ ಸೊಸೈಟಿ ಆಫ್ ಇಂಡಿಯ
ಭಾರತೀಯ ವಿಜ್ಞಾನ ಮಂದಿರ
ಬೆಂಗಳೂರು – 560 012.

2. ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು
ಭಾರತೀಯ ವಿಜ್ಞಾನ ಮಂದಿರದ ಆವರಣ
ಬೆಂಗಳೂರು – 560 012.